Then he has said that the prices have gone up and that only one anna in a rupee or $6\frac{1}{4}$ per cent is required to be paid. All that is fine. Another important factor which he has not considered is whether our agriculturist has got an economic holding. As a matter of fact, in North Kanara District, nearly 66 per cent of them have not got economic holdings; they have got less than that. The prices have gone up but unfortunately these 66 per cent ryots cannot grow sufficient for their livelihood. They can grow just that much which is sufficient for a few months, but they cannot grow sufficient for the whole year. That means, they have to rely upon other things, *viz.* resorting to some labour here and there. Under these circumstances, the point is whether these people who are owning uneconomic holdings will profit by this. The result will be that these people who having less than an economic holding will have to neglect agriculture. That means, they will have to join the chain of others who are shouting for foodstuffs and other things. So, my submission is that these people should be exempted from land assessment. Their case must be sympathetically considered. If these people neglect agriculture, it will be a deadly blow to agriculture itself. As it is, we are deficit to the tune of 15 to 20 per cent and if these people neglect agriculture, they will also have to be fed by the State. What is done in America is to give a rebate to these people. So, the best thing that Government can do is to exempt them from payment of land assessment and I fully agree that those who grow more than is sufficient for their purpose must be asked to pay the enhanced assessment and other things.

Before going to other details, on pages 48 and 40 of the report about K. I. Zone of North Kanara District, the Settlement Officer himself has said :

> "But how far agriculture has progressed is a question that baffles an answer. This is so firstly because the rural agricultural economy is still so complex and undeveloped that the divisions are far less commensurate with the rise in the prices."

He has also said :

> "There is much damage on account of the pests and other diseases and also by the ravages of wild animals."

On page 49, he has said :

> "But it may be noted that while only a few land-holders hold large areas and can spare surplus for sale, the majority cannot spare any surplus for sale."

So, how to protect the interests of this large section of the population will have to be looked into by Government.

Then there are the gazni lands in the North Kanara coastal area. It is stated that these areas can grow 10-12 maunds of paddy on an average per acre. As a matter of fact, it is not possible to grow more than 4 or 5 annas worth of crop on an average in this area. Unfortunately, since 1953 onwards these areas have been subjected to floods and almost nothing is available. The then Bombay Government had some schemes to develop these gazni lands. In 1953-54 they made some attempts and the attempts are still carried on with no success. Unfortunately, it has been impossible to grow after the schemes have been taken up what was at least possible to grow before the schemes were taken up. The schemes did no good. As a matter of fact, they have done great damage to the agriculturists. So, if at all these areas can grow not more than 3 or 4 maunds per acre on an average and the figure of 10 or 12 maunds which was given is all a fiction. It is stated that the agriculturist has cleared his old debts. This is far from the truth. According to my knowledge and also according to the report of the Reserve Bank the pre-independence debt of an average family was in the vicinity of Rs. 60, but now the debt has gone up to Rs. 240. This pertains only to rural families. It was said by the Minister and also it is stated in the report that our Five Year Plans bestow so much benefit on our people. In this connection the Minister quoted Prof. Mahalanobis, but I would like to point out that the very same Prof. Mahalanobis has stated and that view was shared by the late Prime Minister also in the discussion of that report in the Lok Sabha, that the plan benefits have gone to only 10 to 15 per cent of the people and that 85 per cent of the rural people or urban people have gained nothing. All the money spent has gone to the benefit of the big men, the big contractors and exploiters and the big swindlers and the common man has gained nothing. So even if this land revenue is raised it is doubtful whether the benefit to be given would go to the agriculturist.

SRI M. V. KRISHNAPPA.—That is why we want to leave the entire land revenue in the village itself for their development.

SRI B. P. KADAM.—Then it will go to the big guns in the village and not to the common man. I can give a large number of instances to prove this. We know cases of wells being dug up which are inspected by the PWD Supervisor in the early hours of the day and certified to contain water, but do not have a drop of water after a period of 2 hours. For major part of the year these wells do not have any water in them. Similarly, the money said to have been spent on roads is not spent on roads. The manure allotted to the village goes to some big guns of the village who are the stooges of the officer. The common man has not benefited in any way. I can give any number of instances to show that only the big contractors have benefited a good deal and the common man has got nothing.

It has been stated rightly on page 32 of the report that in Karwar Taluka the increase in acreage is almost nil in the last 30 years. This

(SRI B. P. KADAM)

goes to show that even in the 5 taluks of North Kanara District to which the Minister referred, the Government would do well to find out why the acreage has not gone up. It is because the climate is not healthy; rural communication is still difficult; medical facilities are not there. There has been great damage by wild boors and other animals. Because of these reasons the acreage is not coming up and the common man is not taking to agriculture in all seriousness and is averse to going back to the villages. In the circumstances I fail to understand why the Survey Settlement Report says that the land revenue should be raised to the tune of 160%. It is said that unemployment is there for 4 to 7 months of the year and there is no solution to that. Since there is this unemployment among the villagers in the coastal area in North Kanara District and since these people constitutes about 66% of the population and have less than economic holding, and since the Government can do nothing to solve this unemployment, where is the justification to raise the land revenue? In spite of this, if the land assessment is raised, it will be highest act of cruelty and the result will be that the people will be compelled to give up agriculture. In this connection, I have an alternative suggestion to make to Government. If the Government think that they can raise the land assessment of those people who are having less than economic holding, then the Government should take over the entire lands from that section which constitute nearly 66% of the people, and absorb them as agricultural labourers all the year round paying them reasonable wages.

Otherwise this 66 per cent of the agriculturists who have less than economic holding will be subjected to a slow process of liquidation because they cannot resort to agriculture whole heartedly and they cannot take any other employment gainfully and they will be the most neglected section worse than the city labourers. This section must be very sympathetically considered. Otherwise, this food deficit which India is facing today is bound to go up. It is said that we have got only 15 per cent deficit and yet this country is going begging before America, Australia and other countries. In the face of this, if this survey settlement report is pursued in the present form killing that section having less than economic holding the result would be that this section be wiped out and the food problem in this country would be the gravest possible in history. By neglecting agriculture and on account of certain factors which this Government cannot solve, our country is losing so much money on foreign exchange. Not only money, but it has also lost its reputation by going with a begging bowl to other countries since the dawn of independence. The situation will be still more acute and there will be demonstrations of the worst of its kind, unparalleled in history. The Government will have to consider that aspect.

The Hon'ble Minister said that it has been found convenient to divide the State into Zones consisting of a few taluks deviating from the earlier survey settlement reports. Of course, this has got certain

benefits as it will read to speed revision settlement, but it has got certain grave defects also particularly in areas like North Kanara and South Kanara where the topography is varying according to the mountainous terrain as stated in the report itself on page 11. These details ought to have been considered by Government because there are certain areas which have changed their character after 1911 after the first settlement survey report. On account of erosion

[Mr. SPEAKER in the Chair.]

and other factors where there were only bund lands, some gardens have grown up and where there were certain good paddy lands the whole land has been washed away.

Mr. SPEAKER.—Their grievance is that from the mountains all the fertile soil has come down and has been deposited in his area.

Sri B. P. KADAM.—No, no, but it has been washed away to the Arabian ocean and our soil is left barren.

Sri M. V. KRISHNAPPA.—The whole of the coastal belt has been formed over centuries owing to erosion created by the ghats.

Sri B. P. KADAM.—One learned writer, Mr. Kane from Maharashtra, wrote about the Konkan in Marathi...which means "there is a crop every year, but it is starvation everywhere".

Mr. SPEAKER.—But there are no scarcity conditions. There is plenty of rain and cultivation can go on all the 12 months.

Sri B. P. KADAM.—Cultivation is only for 4 or 5 months.

Sir, Hon'ble Revenue Minister said that the resettlement officers have expressed gratitude to so many agriculturists, representatives of agriculture, village officers, etc., who co-operated with them. As a matter of fact, I have not heard the name of the officer who worked in Karwar Taluk, one Mr. Goy—which means a 'cow' in Marathi. I can say with full confidence that he has not toured in any village of Karwar Taluk and he did not contact anybody. Further, the Deputy Commissioner should have given his findings on the objections filed by us and the public. I myself forwarded a thousand objections and there is no mention of them anywhere. I must say that the officer for Supa, Mr. Kamdod toured the villages. Therefore, I would respectfully request the Hon'ble Minister to take into consideration the other cesses which are contemplated in the Zilla Parishad Bill. People with less than the economic holding would be hard hit.

Mr. SPEAKER.—I belive today is the last day allotted for the discussion of this resolution. I want to find out what more time would be required, whether it can be a couple of hours more or half-a-day.

Sri S. M. KRISHNA.—I respectfully suggest that two more days might be allotted for discussion of this all-important report and resolution. That is the minimum time required.

Mr. SPEAKER.—I agree but within two days replies, clarifications and everything must be over. I will reserve half-a-day after tea-break for replies. Having regard to the impertance of the subject, I am inclined to favour two-days more.

Sri B. D. JATTI.—Would the House really require two more days ?

Sri H. R. KESHAVA MURTHY.—This sort of resolution comes once in 30 years and full consideration must be given.

Sri B. D. JATTI. —Two days might be given, Sir.

Mr. SPEAKER.—Tomorrow we take up the Budget. It has to be passed by March.

(At this stage Sri K. P. Revanasiddappa and Sri K Lakappa were seen carrying together big bundless of papers)

Mr. SPEAKER.—I must really admire the Government for the infinite pains Government have taken in collecting so much data. I am very much impressed by the forceful arguments in the form of demonstration to show that more time would be required. (*Laughter*).

Sri M. V. KRISHNAPPA.—If the Hon'ble Member cannot read the whole thing, he can atleast use it as a pillow to sleep.

Mr. SPEAKER.—Yes, he has the knack of absorbing things in that manner without further effort. (*Laughter*). At the end of today this Debate will stand adjourned and consideration will be resumed on the 13th allotted for non-official business. We will have to dispense with the non-official business on that day.

(Some Members rose)

Is the House prepared to sit twice a day so that the Budget proceedings would not be disturbed ?

Sri S. M. KRISHNA.—According to the programme, we adjourn on the 4th of April. Consideration of this resolution might be taken up on the 5th and 6th.

Mr. SPEAKER.—Government have to take action after the passing of the resolution one way or the other.

Sri S. M. KRISHNA.—I propose that the Leader of the Opposition, the leaders of various groups discuss the matter with the Leader of the House and come to some conclusion.

Mr. SPEAKER.—That is a proposition which I wanted long time back. In any case the matter would be adjourned today and we shall see afterwards. If no agreement is arrived at, I will fix a time which I feel proper and there should be no complaints that non-official day has been denied and so on. After all, non-official day is not lost, it is carried forward.

[MR. DEPUTY SPEAKER in the Chair.]

4-00 P.M.

ಶ್ರೀ ಟಿ. ಮಾದಯ್ಯ ಗೌಡ (ರಾಮನಗರ).—ಸ್ವಾಮಿ, ಭೂ ಕಂದಾಯ ಎಲ್ಲ ಕಾಲದಲ್ಲೂ ಪ್ರಪಂಚದ ಎಲ್ಲ ದೇಶಗಳಲ್ಲಿಯೂ ರೈತರ ಬೆನ್ನು ಸುಲಿಯತಕ್ಕ ಒಂದು ದೊಡ್ಡ ಸಮಸ್ಯೆ. ಇದು ಇವೊತ್ತಿಗೆ ಹೊಸದೇನೂ ಇಲ್ಲ. ಮನುವಿನ ಕಾಲದಿಂದಲೂ ಆಗಿನ ರಾಜ್ಯಭಾರದ ಕಾಲದಿಂದಲೂ

ಭೂ ಕಂದಾಯದ ಪದ್ಧತಿಯನ್ನು ಅನುಸರಿಸುತ್ತ ಬಂದಿದ್ದಾರೆ. ಇದು ಹೇಗಿದೆ ಎಂದರೆ, ಇಂಡಿಯಾ ದೇಶದಲ್ಲಿ ಇಲ್ಲದ ಪದ್ಧತಿಯಲ್ಲ, ಮೈಸೂರು ದೇಶದಲ್ಲಿ ಇಲ್ಲದ ಪದ್ಧತಿಯಲ್ಲ. ಪ್ರಪಂಚದ ಎಲ್ಲ ದೇಶಗಳಲ್ಲಿಯೂ ಇಂತಹ ಭೂಕಂದಾಯದ ಪದ್ಧತಿ ಇದೆ. ಆದರೆ ಇದು ಯಾವ ಕಾಲದಲ್ಲಿ ಬಂತು ಎನ್ನುವುದನ್ನು ಯಾರೂ ಹೇಳುವಂತಿಲ್ಲ. ಯಾವ ದೇಶದಲ್ಲಿ ಭೂ ಕಂದಾಯದ ಪದ್ಧತಿ ಇಲ್ಲ ಎನ್ನುವುದನ್ನು ಇದುವರೆಗೂ ಯಾರೂ ಇಲ್ಲಿ ಹೇಳಲಿಲ್ಲ.

ಶ್ರೀ ಎ. ಪಿ. ಅಪ್ಪಣ್ಣ.—There is no land reforms in Ceylon.

ಶ್ರೀ ಟಿ. ಮಾದಯ್ಯ ಗೌಡ.—ಅದು ನನಗೆ ಗೊತ್ತಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ರಷ್ಯದಲ್ಲಿ ಭೂ ಕಂದಾಯವೇ ಇಲ್ಲ. ಏಕೆಂದರೆ ಅಲ್ಲಿ ಇರುವ ರೈತರುಗಳಿಗೆ ಜಮೀನೇ ಇಲ್ಲ.

ಶ್ರೀ ಟಿ. ಮಾದಯ್ಯ ಗೌಡ.—ಆದರೂ ಸಹ ನಮ್ಮ ಭರತಖಂಡದಲ್ಲಿ ಕಂದಾಯವನ್ನು ತೆಗೆದು ಹಾಕಬೇಕೆಂದು ಹಾಗೂ ರೈತನ ಮೇಲಿನ ಹೊರೆಯನ್ನು ತಪ್ಪಿಸಬೇಕೆಂದು ಬಹು ಕಾಲದಿಂದಲೂ ಕಾಂಗ್ರೆಸ್ಸಿನವರು ಆಲೋಚನೆ ಮಾಡುತ್ತಲೇ ಇದ್ದಾರೆ. ಅಂತಹ ಕಾಲ ಇನ್ನೂ ಬಂದಿಲ್ಲ. ಅದು ಬರುವುದಕ್ಕೆ ಇನ್ನೂ ಹತ್ತು ಇಪ್ಪತ್ತು ವರ್ಷಗಳಾದರೂ ಬೇಕಾಗುತ್ತದೆ. ಅಂತಹ ಒಂದು ಕಾಲ ಬಂದಮೇಲೆ ನಮ್ಮ ವಿರೋಧ ಪಕ್ಷದವರು ಏನು ಇಲ್ಲಿ ಹೇಳುತ್ತಿದ್ದಾರೆ ಕಂದಾಯವನ್ನು ತೆಗೆಯಬೇಕು ಎಂದು, ಅಂತಹ ಕಾಲ ಬಂದರೂ ಬಂದಾತು. ಬಹುಶಃ ಇನ್ನೂ ಮೂವ್ವತ್ತು ವರ್ಷಗಳ ಕಾಲ ಈ ಕಂದಾಯ ಪದ್ಧತಿಯನ್ನು ತೆಗೆಯಲು ಸಾಧ್ಯವಿಲ್ಲ. ಭರತಖಂಡದಲ್ಲಿ ನಾವು ಒಂದು ರಾಜ್ಯವನ್ನು ಕಟ್ಟುತ್ತ ಇರುವ ಈ ಕಾಲದಲ್ಲಿ ಭರತಖಂಡದಲ್ಲಿರುವ ಎಲ್ಲ ರಾಜ್ಯಗಳಲ್ಲಿಯೂ ಪ್ರತಿಯೊಂದು ಭಾಗವನ್ನು ಪುನರ್ ನಿರ್ಮಾಣ ಮಾಡಬೇಕಾಗಿದೆ, ಇಂತಹ ಕಾಲದಲ್ಲಿ ಹಣ ಬೇಕು ಎನ್ನುವುದು ನಮಗೆ ಬಹಳ ದೊಡ್ಡ ಸಮಸ್ಯೆಯಾಗಿದೆ ಎಂದು ಅನೇಕ ಸಾರಿ ಇಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಇದರ ಬಗ್ಗೆ ಅನೇಕರು ಇಲ್ಲಿ ಹೇಳಿದ್ದಾರೆ. ನಾವು ಕೇವಲ ಒಂದು ಪೋಲೀಸು ಅಥವಾ ಮಿಲಿಟರಿಯವರಂತೆ ರಾಜ್ಯವನ್ನು ನಡೆಸುವ ಕಾಲವಲ್ಲ. ಭರತಖಂಡದಲ್ಲಿರುವ ಪ್ರತಿಯೊಂದು ವಿಚಾರದಲ್ಲೂ ಕೂಡ ಕೈ ಹಾಕಬೇಕಾಗಿದೆ ಎಂದರೆ 'ಫ್ರಾಂ ಊಂಬ್ ಟು ದಿ ಟೂಂಬ್' ಎನ್ನುವಂತೆ ಎಲ್ಲ ಸರ್ವಿಸ್ಸುಗಳನ್ನೂ ಜನತೆಗೆ ಕೊಡಬೇಕಾಗಿದೆ. ಹಿಂದೆ ಆಳಿದ ರಾಜರುಗಳ ಕಾಲದಲ್ಲಿ, ಎಂದರೆ, ಮೌರ್ಯರ ಕಾಲದಲ್ಲಿ ಏನು ರಾಜ್ಯಭಾರ ನಡೆಸುತ್ತ ಇದ್ದರೋ ಆಗ ಏನು ಸರ್ವಿಸ್ಸುಗಳನ್ನು ಕೊಡುತ್ತಿದ್ದರೋ ಅದಕ್ಕಿಂತ ಹೆಚ್ಚಾಗಿ ಈಗಿನ ಕಾಲದ ರಾಜ್ಯಭಾರದಲ್ಲಿ ಜನಕ್ಕೆ ನಾವು ಎಷ್ಟೋ ಸರ್ವಿಸ್ಸುಗಳನ್ನು ಕೊಡುತ್ತ ಬರುತ್ತಿದ್ದೇವೆ. ನಮ್ಮ ಜನಕ್ಕಾಗಿ ಸ್ಕೂಲುಗಳು, ನಮ್ಮ ಜನಕ್ಕಾಗಿ ಆಸ್ಪತ್ರೆಗಳು, ನೀರಾವರಿ ಸೌಕರ್ಯಗಳು ಇತ್ಯಾದಿ, ಇತ್ಯಾದಿ ಸೌಕರ್ಯಗಳನ್ನೆಲ್ಲಾ ಕೊಡುವುದಕ್ಕಾಗಿ ಎಷ್ಟೋ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತ ಹೋಗುತ್ತಿದ್ದೇವೆಂದು ಹೇಳುತ್ತಿದ್ದೇವೆ. ಹೀಗೆ ಖರ್ಚು ಮಾಡತಕ್ಕ ಈ ಕಾಲದಲ್ಲಿ ಜನಕ್ಕೆ ಅನುಕೂಲ ಮಾಡಬೇಕೆಂದು ರಸ್ತೆಗಳನ್ನು ಮಾಡಿಸುವುದು, ನೀರಾವರಿ ಸೌಕರ್ಯಗಳನ್ನು ಒದಗಿಸುವುದು ಇತ್ಯಾದಿಗಳನ್ನು ಮಾಡಲು ಹೆಚ್ಚಾಗಿ ವೆಚ್ಚ ಮಾಡಬೇಕಾಗಿರುವಾಗ ಇದನ್ನೇ ದೊಡ್ಡದಾಗಿ ಇಲ್ಲಿ ಹೇಳಬೇಕಾಗಿಲ್ಲ. ಮುಂದೆ ಕಾಲ ಬಂದಾಗ ಹೀಗೆ ನೂರಾರು ಕೋಟಿಯಷ್ಟು ಖರ್ಚು ಮಾಡುವ ಪ್ರಸಂಗ ಬರದೇ ಇರಬಹುದು. ಅಂತಹ ಕಾಲ ಬಂದಾಗ ಬೇಕಾದರೆ ಕಂದಾಯವನ್ನು ಮಾಫೀ ಮಾಡಬೇಕು ಎಂದು ಕೇಳಬಹುದು. ಈಗ ರೈತನಿಗೆ ಹೆಚ್ಚು ಉಪಯೋಗ ಮಾಡಿಕೊಡಬೇಕು ಮತ್ತು ಅದಕ್ಕಾಗಿ ನಾವು ಸಹಾಯ ಮಾಡಲು ಸಿದ್ಧರಾಗಿರಬೇಕು. ರೈತ ಇರುವುದು ರಾಜ್ಯಕ್ಕಾಗಿ, ರಾಜ್ಯ ಇರುವುದು ರೈತರಿಗಾಗಿ. ಅವರಿಗೆ ಬೇಕಾದ ಸೌಕರ್ಯಗಳನ್ನು ಮಾಡಿ ಕೊಡಬೇಕೆಂದು ಸುಖೀ ರಾಜ್ಯವನ್ನು ಮಾಡಬೇಕೆಂದಿರುವ ಈ ಕಾಲದಲ್ಲಿ ರಾಜ್ಯವನ್ನು ಕಟ್ಟುವುದಕ್ಕೆ ಬೇಕಾದ ಕೆಲಸಕಾರ್ಯಗಳನ್ನು ಮಾಡದೇ ಇರಬೇಕು ಎಂದರೆ ಹೇಗೆ? ವಿರೋಧ ಪಕ್ಷದವರು ಏನು ಹೇಳುತ್ತಿದ್ದಾರೆಂದರೆ, ಕಂದಾಯವನ್ನು ಮಾಫಿ ಮಾಡಿಬಿಡಿ ಎಂದು ಅಷ್ಟು ಸುಲಭವಾಗಿ ಹೇಳುವ ಮಾತಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ಕಂದಾಯವನ್ನು ಕೊಡಬೇಡಿ, ಎನ್. ಜಿ. ಓ. ಗಳಿಗೆ ಸಂಬಳ ಜಾಸ್ತಿ ಮಾಡಿ ಎಂದು ಹೇಳುತ್ತಾರೆ.

ಶ್ರೀ ಟಿ. ಮಾದಯ್ಯ ಗೌಡ.—ಕಾಂಗ್ರೆಸ್ ರಾಜ್ಯ ಇರುವುದು ರೈತರನ್ನು ಉದ್ಧಾರ ಮಾಡುವುದಕ್ಕೋಸ್ಕರ ಮತ್ತು ಅಂತಹ ಸುಖೀ ರಾಜ್ಯವನ್ನು ಕಟ್ಟುವುದಕ್ಕೋಸ್ಕರ ನಮಗೆ ಹಣ ಬೇಕು. ಅದಕ್ಕೆ ಸಹಾಯ ಮಾಡಿ ಸಹಕರಿಸುವುದನ್ನು ಬಿಟ್ಟು ಬಿಟ್ಟು ನಮ್ಮ ವಿರೋಧಪಕ್ಷದ ಸದಸ್ಯರು ಯಾವ ಸಹಕಾರವನ್ನೂ ಕೊಡದೇ ಸುಮ್ಮನೆ ಇಲ್ಲಿ ಅಷ್ಟು ಲಘುವಾಗಿ ಮಾತಾಡುವುದು ಸರಿಯಲ್ಲ. ಕಂದಾಯ ವಸೂಲ್ಮಾಡುವುದನ್ನು ಬಿಟ್ಟು ಬಿಡಿ ಎಂದು ಅವರು ಹೇಳುವುದು ಸರಿಯಲ್ಲ. ಇವತ್ತಿನ ದಿವಸ ಅಲ್ಲಲ್ಲಿ ನೀರಾವರಿ ಸೌಕರ್ಯ ಒದಗಿಸಿದ್ದರೂ ಕೂಡ ಏನೂ ಮಾಡಿಲ್ಲ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಮೂವತ್ತು ವರ್ಷಗಳ ಹಿಂದೆ ಕಂದಾಯ ವಸೂಲಿ ಮಾಡಲಾಗಿತ್ತು. ಇಂದು ರೈತನ

(ಶ್ರೀ ಟಿ. ಮಾದಯ್ಯಗೌಡ)

ಉತ್ಪತ್ತಿ ನೋಡಿಕೊಂಡು ಸರಿಯಾದ ರೀತಿಯಲ್ಲಿ ಶಾಸ್ತ್ರೀಯವಾಗಿ ಕಂದಯ ಗೊತ್ತು ಮಾಡಿದರೆ ಅದನ್ನು ಎಲ್ಲ ರೈತರು ಒಪ್ಪಿಕೊಳ್ಳ ಬೇಕಾಗುತ್ತದೆ. ಕೇವಲ ಕಾಂಗ್ರೆಸ್‌ಅವರು ಹೆಚ್ಚು ಕಂದಾಯ ಹಾಕಿಬಿಟ್ಟರು ಎಂದು ವಿರೋಧ ಪಕ್ಷದವರು ಹೇಳಿ ಬಿಟ್ಟರೆ ಅದಕ್ಕೆ ಏನು ಅರ್ಥ ? ಈ ರೀತಿ ಅಪಪ್ರಚಾರ ಮಾಡುವುದು ಸರಿಯಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕಂದಾಯ ಮಾಫೀ ಮಾಡುತ್ತೇವೆಂದು ಕೃಷ್ಣಪ್ಪನವರು ಹೇಳಿದ್ದಾರೆ.

ಶ್ರೀ ಎಂ. ವಿ. ಕೃಷ್ಣಪ್ಪ.—ನಾನು ಹೇಳದೇ ಇಲ್ಲದ್ದನ್ನು ನಾನು ಹೇಳಿದೆನು ಎಂದು ಹೇಳಬೇಡಿ.

ಶ್ರೀ ಎಸ್. ಎಂ. ಕೃಷ್ಣ.—ಮುಳುಬಾಗಿಲು ಜಾತ್ರೆಯಲ್ಲಿ ಕೃಷ್ಣಪ್ಪನವರು ಇದನ್ನು ಹೇಳಿದ್ದಾರೆ.

ಶ್ರೀ ಟಿ. ಮಾದಯ್ಯ ಗೌಡ.—ದೇಶದಲ್ಲಿ ಅಪಪ್ರಚಾರ ಮಾಡಿ ದೊಡ್ಡ ಸಾಧನೆ ಮಾಡುತ್ತೇವೆಂದು ಹೇಳುತ್ತಾ ಎಲ್ಲಾ ರೈತರನ್ನೂ ಒಲಿಸಿಕೊಳ್ಳಲು ಸಾಧ್ಯವಿಲ್ಲ. ಇಂದು ರೈತ ಬುದ್ಧಿವಂತನಾಗಿದ್ದಾನೆ. ತಿಳುವಳಿಕೆಯುಳ್ಳವನಾಗಿದ್ದಾನೆ. ಸರಕಾರ ಏತಕ್ಕೆ ಹೆಚ್ಚು ಕಂದಾಯ ವಸೂಲ್ಮಾಡುತ್ತಾರೆ ಎನ್ನುವುದು ರೈತನಿಗೆ ಚೆನ್ನಾಗಿ ಗೊತ್ತಿದೆ. ಸರಕಾರ ದೇಶದಲ್ಲಿ ಅನೇಕ ನೀರಾವರಿ ಸೌಕರ್ಯ ಮಾಡಿದ್ದಾರೆ. ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿದ್ದಾರೆ. ಒಂದು ವೇಳೆ ಸರಕಾರ ಮಾಡಿರತಕ್ಕಂಥ ಒಳ್ಳೇ ಕೆಲಸಗಳನ್ನು ಹೇಳುವುದು ಬೇಡ. ಆದರೆ ಈ ರೀತಿ ಅಪ ಪ್ರಚಾರದ ಕಂತೆ ಕಟ್ಟಿಕೊಂಡು ಹೇಳುವುದು ಸರಿಯಲ್ಲ. ಈ ರೀತಿ ಅಪ ಪ್ರಚಾರ ಮಾಡುವುದರಿಂದ ಅವರ ಪಾರ್ಟಿ ದೊಡ್ಡದಾಗುತ್ತದೆಯೇ ! ನ್ಯಾಯವಾದ ರಚನಾತ್ಮಕ ಸಲಹೆ ಸೂಚನೆಗಳನ್ನು ಕೊಡಬೇಕೆಂದು ಹೇಳುತ್ತೇನೆ. ನಡೆಯುವ ಕಾಲು ಎಡವುತ್ತದೆ ಎಂದು ಹೇಳಿದ ಹಾಗೆ ಕೆಲಸ ಕಾರ್ಯ ಮಾಡತಕ್ಕವರು ಕೆಲವೊಂದು ಸಲ ತಪ್ಪುತ್ತಾರೆ. ನಾವು ತಪ್ಪು ಮಾಡುವುದಿಲ್ಲ ಎಂದು ನಾನು ಹೇಳುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಡಗೂಲಜ್ಜಿ ಕಥೆ ಹೇಳಿದ ಹಾಗೆ ಅದನ್ನೇ ಪುನಃ ಪುನಃ ಹೇಳಬೇಡಿ.

ಶ್ರೀ ಟಿ. ಮಾದಯ್ಯ ಗೌಡ.—ಇದು ಅಡಗೂಲಜ್ಜಿ ಕಥೆ ಅಲ್ಲ. ನಾನು ವಿಶ್ವಾಸಪೂರ್ವಕವಾಗಿ ಒಂದು ಮಾತನ್ನು ಹೇಳುತ್ತೇನೆ. ಕನ್‌ಸ್ಟ್ರಕ್ಟಿವ್ ಸಜೆಷನ್ಸ್ ಕೊಡಿ. ಅದಕ್ಕೆ ಯಾರೂ ಬೇಡವೆನ್ನುವುದಿಲ್ಲ. ಮೂವತ್ತು ವರ್ಷಗಳ ಹಿಂದೆ ಗೊತ್ತುಮಾಡಿ ಇವತ್ತಿನವರೆಗೂ ಇರತಕ್ಕ ಕಂದಾಯವನ್ನು ರಿವೈಜ್ ಮಾಡುತ್ತಾರೆ ಎಂದು ರೈತನಿಗೆ ಗೊತ್ತಿಲ್ಲವೇ ? ಕಂದಾಯ ರಿವೈಜ್ ಮಾಡುವುದರಲ್ಲಿ ಒಂದು ರೀತಿಯ ಶಾಸ್ತ್ರೀಯ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ಈ ಶಾಸ್ತ್ರೀಯ ಪದ್ಧತಿಯು ಬಹಳ ಸಮರ್ಪಕವಾಗಿದೆ ಎಂದು ನಾನು ಹೇಳುತ್ತೇನೆ. ಈಗ ಉತ್ಪತ್ತಿ ಎಷ್ಟು ಬರುತ್ತದೆ, ಧಾನ್ಯಕ್ಕೆ ಬೆಲೆ ಎಷ್ಟು ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ನಿಗದಿ ಮಾಡುತ್ತಾರೆ. ಈ ಪದ್ಧತಿ ಹಿಂದಕ್ಕೆ ಇರಲಿಲ್ಲ. ಸಂಪೂರ್ಣವಾಗಿ ಶಾಸ್ತ್ರೀಯವಾದ ಪದ್ಧತಿ ಇಟ್ಟುಕೊಳ್ಳುವುದು ಸಹ ಕಷ್ಟ ಅದರಲ್ಲಿಯೂ ಕೂಡ ಲೋಪದೋಷಗಳು ಇರುತ್ತವೆ. ಇಂದು ದೇಶದಲ್ಲಿ ಎಷ್ಟು ಉತ್ಪತ್ತಿಯಾಗುತ್ತದೆ ಎನ್ನುವುದಕ್ಕೆ ಅಂಕಿ ಅಂಶಗಳನ್ನು ತೆಗೆದುಕೊಳ್ಳುತ್ತಾರೆ. ಕ್ರಾಪ್ ಕಟಿಂಗ್ ಎಕ್ಸ್‌ಪೆರಿಮೆಂಟ್ ಮಾಡಿದ್ದಾರೆ. ಈ ಪದ್ಧತಿ ಪರ್ಫೆಕ್ಟ್ ಆಗಿದೆ. ಲೋಪದೋಷಗಳಿಲ್ಲ ಎಂದು ಹಾಗೆ ಯಾರೂ ಹೇಳುವುದಿಲ್ಲ. ಕ್ರಾಪ್ ಕಟಿಂಗ್ ಎಕ್ಸ್‌ಪೆರಿಮೆಂಟ್‌ನಲ್ಲಿ ಹೆಚ್ಚು ಬೆಳೆ ಬರುತ್ತದೆ. ಇದರ ಬಗ್ಗೆ ಕೆಲವರಿಗೆ ಅನುಮಾನ ಸಹ ಇದೆ. ಶ್ಯಾನುಭೋಗರು ಸರಿಯಾಗಿ ಪಹಣಿ ಬರೆಯದೇ ಇರುವುದರಿಂದ ಇದರಲ್ಲಿ ತಪ್ಪು ಆಗುವುದಕ್ಕೆ ಅವಕಾಶ ಇದೆ ಎಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ ಈಗ ಸರಾಸರಿ ಎಷ್ಟು ಬೆಳೆ ಆಗುತ್ತದೆ ಎನ್ನುವುದನ್ನು ತಿಳಿದುಕೊಂಡಿದ್ದಾರೆ. ರೈತನಿಗೆ ಏನು ಬೆಲೆ ಬರುತ್ತದೆ ಎನ್ನುವ ವಿಚಾರದಲ್ಲಿ ರೆಗ್ಯೂಲೇಟೆಡ್ ಮಾರ್ಕೆಟ್ ಅವರನ್ನು ಕನ್‌ಸಲ್ಟ್ ಮಾಡಿದ್ದಾರೆ. ರೆಗ್ಯುಲೇಟೆಡ್ ಮಾರ್ಕೆಟ್ಟಿನವರು ಸುಳ್ಳು ಲೆಕ್ಕ ಬರೆದಿದ್ದಾರೆ ಎಂದು ಹೇಳುವುದಕ್ಕಾಗುವುದಿಲ್ಲ, ಯಾಕೆಂದರೆ, ಅವರು ವಿಚಕ್ಷಣೆಯಿಂದ ನೋಡಿಕೊಳ್ಳುತ್ತಾರೆ.

Sri C. J. MUCKANNAPPA.—Sir, he has not seen what Regulated Market is ? I have been a member of the Regulated Market for 10 years and I know how bogus accounts are mentioned.

Sri M. V. KRISHNAPPA.—I think, you are a party to this bogus accounts.

Sri C. J. MUCKANNAPPA.—Sir, the Minister for Revenue ntervened and said, that I am a party for that. Is it right ? I have

brought this matter to the notice of the Government and the Registrar of Co-operative Societies. If 100 pallas come to market, only 50 pallas will be shown in the books. The remarks passed by the Minister should be withdrawn, Sir.

Sri M. V. KRISHNAPPA.—I will withdraw.

ಶ್ರೀ ಟಿ. ಮಾದಯ್ಯ ಗೌಡ.—ಬೆಲೆ ವಿಚಾರದಲ್ಲಿ ಸಾಧ್ಯವಾದ ಮಟ್ಟಿಗೆ ಸರಿಯಾದ ಅಂಕಿ ಅಂಶಗಳು ದೊರೆತಿವೆ. ಪೂರ್ವದಲ್ಲಿ ಈ ರೀತಿ ಇರಲಿಲ್ಲ. ರೆಗ್ಯುಲೇಟೆಡ್ ಮಾರ್ಕೆಟ್ಟಿನವರು ಕರಾರುವಾಕ್ಕಾಗಿ ಬೆಲೆ ನಿಗದಿ ಮಾಡುತ್ತಾರೆ. ಆದುದರಿಂದ ಸರಾಸರಿ ಬೆಲೆ ನಿಗದಿ ಮಾಡಲು ಅನುಕೂಲವಾಗುತ್ತದೆ. ಈ ಪದ್ಧತಿ ಶಾಸ್ತ್ರೀಯವಾಗಿದೆ. ರೀಸೆಟಲ್‌ಮೆಂಟ್ ಮಾಡಲು ಒಂದೊಂದು ತಾಲ್ಲೂಕು ಒಂದು ಝೋನ್ ಎಂದು ಮಾಡಿದ್ದಾರೆ. ಈ ಪದ್ಧತಿಯಲ್ಲಿ ತಪ್ಪಾಗಲಾರದು ಎಂದು ಅನಿಸುತ್ತದೆ. ಆದರೆ ಐದಾರು ತಾಲೂಕುಗಳನ್ನು ಸೇರಿಸಿ ಒಂದು ಝೋನ್ ಮಾಡುವುದರಿಂದ ಬಹುಶಃ ಕರಾರುವಾಕ್ಕಾಗಿ ಅಂಕಿ ಅಂಶಗಳು ಸಿಕ್ಕುವುದಿಲ್ಲ ಎಂದು ಹೇಳಿದರೆ ಅದು ತಪ್ಪಾಗಲಾರದು. 9ನೇ ಝೋನಿನಲ್ಲಿ ಚನ್ನಪಟ್ಟಣ ತಾಲ್ಲೂಕಿನ ಜೊತೆಗೆ ಬೆಂಗಳೂರು ಸೌತ್ ಹಾಗೂ ನಾರ್ತ್, ಆನೇಕಲ್, ರಾಮನಗರಂ, ಕನಕಪುರ ತಾಲ್ಲೂಕುಗಳನ್ನು ಸೇರಿಸಿದ್ದಾರೆ. ಇವು ಒಂದಕ್ಕೊಂದು ದೂರ ಇರುವುದರಿಂದ, ಒಂದು ಕಡೆ ರಾಗಿ ಬೆಳೆದರೆ ಇನ್ನೊಂದು ಕಡೆ ಕಡಲೇಕಾಯಿ ಬೆಳೆಯುತ್ತಾರೆ. ಈ ರೀತಿ ದೂರ ಇರತಕ್ಕ ಪ್ರದೇಶ ಒಂದು ಕಡೆ ಸೇರಿಸಿ ಲೆಕ್ಕ ತೆಗೆದುಕೊಳ್ಳುವುದು ಸರಿಯಲ್ಲ ಎಂದು ನನಗೆ ಅನಿಸುತ್ತದೆ. ಆದರೂ ಕೂಡ ಒಟ್ಟಿನಲ್ಲಿ ಹಿಂದೆ ನಡೆದದ್ದಕ್ಕಿಂತಲೂ ಈಗಿನ ರೀಸೆಟಲ್‌ಮೆಂಟ್ ಪದ್ಧತಿಯು ಬಹುಮಟ್ಟಿಗೆ ಶಾಸ್ತ್ರೀಯವಾಗಿದೆ, ನಡೆಸುತ್ತಿದ್ದಾರೆ, ಎಂಬುದರಲ್ಲಿ ಏನೂ ಸಂದೇಹವಿಲ್ಲ. ವಿರೋಧ ಪಕ್ಷದ ಸದಸ್ಯರು ಹೇಳಿದರು ಈಗ ಇರತಕ್ಕ ಕಂದಾಯ ಒಂದಕ್ಕೆ ಎರಡರಷ್ಟು ಆಗುತ್ತದೆ ಎಂದು. ಕಂದಾಯದಿಂದ ಬರತಕ್ಕ ಈ ಹೆಚ್ಚಿನ ಎಲ್ಲ ಉತ್ಪತ್ತಿಯನ್ನು ಲೋಕಲ್ ಸೆಲ್ಫ್ ಗವರ್ನಮೆಂಟ್ ಇನ್‌ಸ್ಟಿಟ್ಯೂಷನ್ಸ್, ಪಂಚಾಯತಿ, ತಾಲ್ಲೂಕ್ ಬೋರ್ಡು, ಇವುಗಳಿಗಾಗಿ ರಿಜರ್ವ್ ಮಾಡುತ್ತೇವೆಂದು ಮಾನ್ಯ ಕಂದಾಯ ಸಚಿವರಾದ ಶ್ರೀ ಕೃಷ್ಣಪ್ಪನವರು ಹೇಳಿದ್ದಾರೆ.

ಅಷ್ಟಕ್ಕಾಗಿ ಅವರು ಇದನ್ನು ಒಂದು ಅಪಹಾಸ್ಯಕರವಾದ ರೀತಿಯಲ್ಲಿ ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಮಾನ್ಯ ಮಂತ್ರಿಗಳು ಸ್ಥಳೀಯ ಸಂಸ್ಥೆಗಳಿಗೆ ಭೂಕಂದಾಯದಿಂದ ಬರತಕ್ಕ ಹಣವನ್ನೆಲ್ಲಾ ಮೀಸಲಾಗಿ ಇಟ್ಟಿದ್ದೇವೆಂದು ಹೇಳಿದ್ದನ್ನೇ ಒಂದು ಕಾರಣ ಮಾಡಿಕೊಂಡು ಹಾಗೆ ಮಾತನಾಡತಕ್ಕದ್ದು ಸರಿಯಲ್ಲ. ಅವರು ಹಾಗೆ ಮಾತನಾಡಿದ್ದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಯಿತು. ಆದುದರಿಂದ ಸರ್ಕಾರದವರು ಈಗ ಇಲ್ಲಿ ಸೂಚಿಸಿರತಕ್ಕ ರೀತಿಯಲ್ಲಿ ಕಂದಾಯವನ್ನು ವಿಧಿಸುವುದರಲ್ಲಿ ಯಾವ ದೋಷವೂ ಇಲ್ಲ ಎಂದು ನಾನು ಹೇಳುತ್ತೇನೆ. ಈಗ ಭೂ ಕಂದಾಯವನ್ನು ನಿಗದಿ ಮಾಡಿರತಕ್ಕ ಅಧಿಕಾರಿಗಳು ಎಲ್ಲಾ ವಿಚಾರಗಳನ್ನೂ ವಿಮರ್ಶೆ ಮಾಡಿ ಇದನ್ನು ಮಾಡಿದ್ದಾರೆಂದು ನನಗನಿಸುತ್ತಿದೆ. ನನಗೆ ಗೊತ್ತಿರುವ ಹಾಗೆ ನನಗೆ ಸಂಬಂಧಪಟ್ಟ 9ನೇ ಝೋನಿನಲ್ಲಿ ಒಬ್ಬ ರೈತನಿಗೆ ರಾಗಿ, ಭತ್ತ ಇತ್ಯಾದಿ ಬೆಳೆಗಳನ್ನು ಬೆಳೆಯಲು ಒಂದು ಎಕರೆಯಲ್ಲಿ ಆತನಿಗೆ ಖರ್ಚೆಷ್ಟು ಬರುತ್ತದೆ ಎಂಬುದನ್ನು ಆಲೋಚನೆ ಮಾಡಿ ಮಾಡಿದ್ದಾರೆ. ಆದರೆ ಅವರ ಲೆಕ್ಕಚಾರ ಸ್ವಲ್ಪಮಟ್ಟಿಗೆ ಕಡಮೆಯಾಗಿರುವಂತೆ ನನಗೆ ಕಾಣುತ್ತಿದೆ. ಇದನ್ನು ಇನ್ನೂ ಹೆಚ್ಚಿನ ವಿಚಕ್ಷಣೆಯಿಂದ ನೋಡಿದರೆ ಇದು ಬಹಳ ಹೆಚ್ಚಾಯಿತೆಂಬುದು ಅವರಿಗೂ ವೇದ್ಯವಾಗಬಹುದು ಎಂದು ನಾನು ಭಾವಿಸಿದ್ದೇನೆ. ಇಲ್ಲ ಒಂದು ಕಡೆ ಇದನ್ನು ನಿಗದಿ ಮಾಡಿದ ಅಧಿಕಾರಿಗಳು ಇಪ್ಪತ್ತನೇ ಒಂದು ಭಾಗ ಇದ್ದರೂ ಪರವಾಗಿಲ್ಲ ಎಂದು ಹೇಳಿದ್ದಾರೆ. ಈ ವಿಚಾರವನ್ನು ಮಾನ್ಯ ಮಂತ್ರಿಗಳು ಇನ್ನೊಮ್ಮೆ ಪರಿಶೀಲಿಸುವುದುತ್ತಮ ಎಂದು ನಾನು ತಿಳಿಸಲಿಚ್ಛಿಸುತ್ತೇನೆ. ಸಾಮಾನ್ಯವಾಗಿ ರೈತನಾದವನು ಆಳುಗಳನ್ನಿಟ್ಟು ಕೆಲಸವನ್ನು ಮಾಡಿಸುವುದಿಲ್ಲ, ಅವರ ಮನೆಮಕ್ಕಳೆಲ್ಲಾ ಸೇರಿ ಆ ಕೆಲಸಗಳನ್ನು ಮಾಡುತ್ತಾರೆ. ಅವರಿಗೆ ಕೂಲಿ ಲೆಕ್ಕ ಹಾಕುವುದಕ್ಕೆ ಸಾಧ್ಯವಿಲ್ಲ, ಆದರೆ ನಾನು ನನ್ನ ಝೋನಿಗೆ ಸಂಬಂಧಪಟ್ಟಂತೆ ಹೇಳುವಾಗ ಇಲ್ಲಿ ಹದಿನಾರನೇ ಒಂದು ಭಾಗ ಸ್ಟ್ಯಾಂಡರ್ಡ್ ರೇಟಾಗುತ್ತದೆಂದು ಹೇಳಿರತಕ್ಕದ್ದು ಸ್ವಲ್ಪ ಹೆಚ್ಚೆ ಎಂದು ನಾನು ಅಂದುಕೊಂಡಿದ್ದೇನೆ. ಆದ್ದರಿಂದ ಇದನ್ನು ಮಾನ್ಯ ಮಂತ್ರಿಗಳು ಪರಿಶೀಲಿಸುತ್ತಾರೆಂದು ನಾನು ನಂಬಿದ್ದೇನೆ. ಅವರು ಇಲ್ಲಿ ಹೇಳಿರತಕ್ಕದ್ದು ಹೀಗಿದೆ:—

> "These factors along the other grounds, create a feeling in me that the maximum rates for dry areas, *i.e.*, Rs. 5.25 and Rs. 4.38 for Groups I and II although conforming to 1/16th of the cash value, is a bit high as it may result a hardship to the

(ಶ್ರೀ ಟಿ. ಮಾದಯ್ಯಗೌಡ)

peasant. 1/20th of the cash value, *i.e.*, Rs. 4.50 and Rs. 3.50 for Groups I and II respectively which is fixed as the maximum rate for dry land, will be reasonable and serve best the interests of the agriculturists and the Government both."

ಹೀಗೆ ಹೇಳಿರುವುದರಿಂದ ಸರ್ಕಾರದವರು ರೈತನ ಹಿತದೃಷ್ಟಿಯಿಂದ ಇನ್ನೊಮ್ಮೆ ಇಲ್ಲಿ ಸೆಟಲ್‌ಮೆಂಟ್ ಆಫೀಸರು ಮಾಡಿರತಕ್ಕ ಸಲಹೆಯನ್ನು ಪರಿಶೀಲಿಸುವುದುತ್ತಮ ಎಂದು ನಾನು ತಿಳಿಸಲಿಚ್ಛಿಸುತ್ತೇನೆ. ಇದನ್ನು ಕ್ಲಾಸಿಫಿಕೇಷನ್ ಆದಮೇಲೆ ಮಾಡುತ್ತೇವೆಂದು ಹೇಳತಕ್ಕದ್ದು ಸರಿಯಲ್ಲ. ಜಮೀನುಗಳಿಗೆ ಈ ಕಂದಾಯವನ್ನು ಅಣೆಗಳ ಮೇಲೆ ನಿಗದಿ ಮಾಡುವ ಮುನ್ನ ಪ್ರತ್ಯೇಕ ಒಬ್ಬ ಅಧಿಕಾರಿಗಳನ್ನು ನೇಮಕ ಮಾಡಿ ತಾವು ಇದನ್ನು ತೀರ್ಮಾನ ಮಾಡುವುದು ಉತ್ತಮ.

ಇನ್ನು ಶ್ರೀ ಬಸಪ್ಪನವರು ಹೇಳಿದಂತೆ ಹಿಪ್ಪನೇರಳೆಯನ್ನು ಸರ್ಕಾರ ಖುಷ್ಕಿ ಬೆಳೆಯಂತಲೇ ನಿರ್ಧರಿಸಬೇಕಾದ್ದು ಯೋಗ್ಯ. ನಾನು ಇಷ್ಟನ್ನು ಹೇಳಿ ನಮ್ಮ ಮುಂದೆ ಈಗ ಇಟ್ಟಿರತಕ್ಕ ಭೂಕಂದಾಯ ಸರಿಯಾಗಿದೆ, ನಾನು ಹೇಳಿದ ಕೆಲವು ತಿದ್ದುಪಡಿಗಳನ್ನು ಇದರಲ್ಲಿ ಅಡಕಮಾಡಿದರೆ ಎಲ್ಲವೂ ಸರಿಹೋಗುತ್ತದೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ರೈತರ ಮಕ್ಕಳೂ, ರೈತರ ಬಂಧುಗಳೂ, ರೈತರ ಹಿತೈಷಿಗಳೂ ಆದ ನಮ್ಮ ಕಂದಾಯ ಮಂತ್ರಿಗಳು ಈ ಸರ್ವೆ ಸೆಟಲ್‌ಮೆಂಟ್ ರಿಪೋರ್ಟ್ ಬಗ್ಗೆ ಮಂಡಿಸಿರುವ ಈ ರೆಸಲ್ಯೂಷನನ್ನು ನಾನು ಕಟುವಾಗಿ ವಿರೋಧ ಮಾಡಬಯಸುತ್ತೇನೆ.

ಅವರು ಇದು ಎಷ್ಟು ಶಾಸ್ತ್ರೋಕ್ತವಾಗಿದೆ ಎಲ್ಲಾ ವಿಧದಿಂದ ಪ್ರೋಸ್ ಅಂಡ್ ಕಾನ್ಸ್ ನೋಡಿ ಕೊಂಡು ಈ ರೈತನಿಗೆ ವಿಧಿಸಿರುವ ಈ ಕಂದಾಯ ಸರಿ ಎಂದು ಸಮರ್ಥಿಸಿ ಹೇಳಿದ್ದಾರೋ ಅಷ್ಟೇ ಗಟ್ಟಿಮುಟ್ಟಾಗಿ ಇದು ಸರಿಯಾಗಿಲ್ಲ, ಸರಿಯಾಗಿ ಮಾಡಿಲ್ಲ, ಅನ್ಯಾಯವಾಗಿದೆ ಎಂದು ಹೇಳುತ್ತೇನೆ. ಬಹುಶಃ ಅವರಿಗೆ ರೈತರ ಮಕ್ಕಳಾಗಿ ಆ ಒಂದು ಬಗೆಯ ಮನೋಧರ್ಮವೇ ಬೆಳೆದು ಈ ಆಫೀಸರು ಗಳ ಮನೋಧರ್ಮ ಗೊತ್ತಾಗಿದೆಯೋ ಇಲ್ಲವೋ ಅರ್ಥವಾಗದಂತಾಗಿದೆ. ನಾನು ಆಫೀಸರರ ಮಗಳಾಗಿ, ರೈತರ ಸೊಸೆಯಾಗಿ ಇಬ್ಬರ ಮನೋಧರ್ಮವನ್ನೂ ತಿಳಿದವಳಾಗಿ ಹೇಳುತ್ತೇನೆ ಕೇಳಿ; ನಾನು ಹೇಳುವುದರಲ್ಲಿ ಕೆಲವು ಆಫೀಸರುಗಳು ಬೇರೆ ಮನೋಧರ್ಮವಿರಬಹುದು ಆದರೆ ಮುಕ್ಕಾಲು ಪಾಲು ಜನಕ್ಕೆ ಮುಕ್ಕಾಲು ಆಫೀಸರುಗಳಿಗೆ ರೈತ ಎಂದರೆ ಏನೋ ಒಂದು ಕನಿಷ್ಟ ಭಾವನೆ. ಅವರ ಕೊಳಕು ಬಟ್ಟೆ, ಒರಟು ಭಾಷೆ, ಕೆದರಿದ ಕೂದಲು, ಇದೆಲ್ಲ ನೋಡಿಕೊಂಡು ಅವರು ಬೆಳೆದು ಕೊಡುವ ನಣ್ಣಕ್ಕಿ, ಕೆನೆ ಹಾಲು, ಬೆಣ್ಣೆ ಕಾಯಿಸಿದ ತುಪ್ಪ ಎಲ್ಲ ಮರೆತು ಇವರ ಕಾಟ ಬಹಳ ಆಯ್ತು, ಹೇಗಾದರೂ ಬಲಿ ಹಾಕಬೇಕು, ಇವರೆಲ್ಲ ಮುಂದೆ ಬರಲು ನೋಡುತ್ತಾರಲ್ಲ, ಇವರು ತಲೆ ಎತ್ತದಂತೆ ಮಾಡಬೇಕು ಅಂತ ಹೇಳಿ ಈ ರಿಪೋರ್ಟು ತಯಾರುಮಾಡಿದಂತಿದೆ.

ಯಾಕೆ ನಾನು ಹೀಗೆ ಹೇಳಬೇಕಾಗಿದೆ ಎಂದರೆ ನಮ್ಮ ರೆವಿನ್ಯೂ ಮಿನಿಸ್ಟರ್ ಪಾಪ, ಪಾಪ ಎನ್ನುವುದು ಜಾಸ್ತಿ. ರೈತರನ್ನು ಬರೀ ಪಾಪ ಎಂದರೆ ಏನು ಪ್ರಯೋಜನ? ಸರ್ಕಾರದ ಸಿಂಪತಿಗೆ ಒಳಗಾಗಬೇಕಾದ ಮತ್ತು ಸರ್ಕಾರದ ಕೃಪಾದೃಷ್ಟಿಗೆ ಪಾತ್ರವಾಗಬೇಕಾದ ತಾಲ್ಲೂಕು ಎಂದರೆ ನನ್ನ ತಾಲ್ಲೂಕು, ಗುಂಡ್ಲುಪೇಟೆ ಒಂದು. ಈ ತಾಲ್ಲೂಕಿಗೆ ಇವರು ಮಾಡಿರುವ ಉಪಕಾರ ಏನು ಎಂದರೆ—411 ಪರ್ಸೆಂಟ್ ಕಂದಾಯ ಜಾಸ್ತಿ ಮಾಡಿರುವುದು. ಈ ತಾಲ್ಲೂಕಿನ ಯಾವ ಸಂಪತ್ತು ಅಭಿವೃದ್ಧಿ ನೋಡಿ ಕಂದಾಯ ಜಾಸ್ತಿ ಮಾಡಿದ್ದಾರೋ ತಿಳಿಯದಂತೆ ಆಗಿದೆ.

ಈವಾಗ ಎಗ್ಸಿಸ್ಟಿಂಗ್ ಕಂದಾಯ ಸ್ವಲ್ಪ ಕೇಳಿ. ಡ್ರೈ 1.75, ವೆಟ್ 7.50, ಗಾರ್ಡನ 8.50, ಮಲ್ಬರಿ 1.75. ಪ್ರಪೋಸ್ಡ್ ಡ್ರೈ 3.12, ಪೆಟ್ ನಾಟ್ ಎಟ್ ಸೆಟ್ಲ್ಡ್ ಗಾರ್ಡನ್ 8.54, ಮಲ್ಬರ್ 12.73. ಒಟ್ಟಿನಲ್ಲಿ 411 ಪರ್ಸೆಂಟ್ ನಮ್ಮಲ್ಲಿಯ ತರೀ ಜಮೀನಿಗಿನ್ನೂ ಕಂದಾಯ ನಿಗದಿ ಮಾಡಿಲ್ಲ. ಅಲ್ಲಿ ಹಾಲಿ ಈಗಿರುವುದು ಟ್ಯಾಂಕ್ ಇರಿಗೇಟೆಡ್ 1,840, ರಿವರ್ (ಹಾಲಹಳ್ಳಿ) 400, ಒಟ್ಟು 2240+300 ಭಾವಿಯಿಂದ ಇರಿಗೇಟ್ ಆಗುವುದು ಅಂದರೆ ಒಟ್ಟು 2,540 ಎಕರೆ. ಇನ್ನು ಮುಂದೆ ಆಗಬಹುದಾದ 12,500 ಎಕರೆಗಳು ಎಲ್ಲಾ ಕೂಡಿ 15,000 ಎಕರೆ ನೀರಾವರಿಗೆ ಇವರು ಹಾಕಬಹುದಾದ ಕಂದಾಯ ಎಷ್ಟು ಅನ್ನುವುದನ್ನು ಸರ್ಕಾರ ದಯವಿಟ್ಟು ತಿಳಿಸಬೇಕು. 160

ಗ್ರಾಮಗಳುಳ್ಳ ನಮ್ಮ ತಾಲ್ಲೂಕಿನ ಪರಿಚಯು ಮತ್ತು ಅಲ್ಲಿಯ ಎಕನಾಮಿಕ್ ಡೆವಲಪ್‌ಮೆಂಟ್ ಎಷ್ಟರಮಟ್ಟಿಗೆ ಆಗಿದೆ ಎಂಬುದನ್ನು ಅಲ್ಲಿಯ ಆಫೀಸರ್ ಈ ರೀತಿ ಹೇಳುತ್ತಾರೆ :

"Although many changes have taken place in the field of agriculture, only wooden ploughs are commonly used in those parts. Iron ploughs are very few and it is not possible for the cultivators even to purchase them on account of their economic reasons".

ಉಳುವ ರೈತನಿಗೆ ಬಾಕಿ ಎಲ್ಲಾ ಹಾಳಾಗಿ ಹೋಗಲಿ ತನಗೆ ಉಳುವುದಕ್ಕೆ ಬೇಕಾಗುವ ಕಬ್ಬಿಣದ ನೇಗಿಲನ್ನು ತೆಗೆದುಕೊಳ್ಳಲು ಯೋಗ್ಯತೆ ಇಲ್ಲದೇ ಇರುವ ಅವನ ಸ್ಥಿತಿ ಗತಿ ಎಷ್ಟರ ಮಟ್ಟಿಗೆ ಇರಬಹುದು ಎನ್ನುವುದು ಸರ್ಕಾರಕ್ಕೆ ತಿಳಿದಿದ್ದರೂ, 411 ಪರ್ಸೆಂಟ್ ಕಂದಾಯ ಹಾಕಿರುವ ಸರ್ಕಾರಕ್ಕೆ ಮತ್ತು ಅದನ್ನು ರೆಕಮೆಂಡ್ ಮಾಡಿರುವ ಅಧಿಕಾರಿಗಳಿಗೆ ನಾನು ಎಂತಹ ಹೃದಯ ಇದೆ ಎಂದು ಹೇಳಬೇಕೋ ತಿಳಿಯದವಳಾಗಿದ್ದೇನೆ. ಮಾದಯ್ಯ ಗೌಡರು ಇದೆಲ್ಲಾ ಸರಿ ಎಂದು ಸರ್ಕಾರದ ನೀತಿಯನ್ನು ಬಹಳ ಶ್ಲಾಘಿಸಿದರು. ನಾನು ಬಹುಶಃ ಅವರು ಅರೆನಿದ್ರೆಯಲ್ಲಿ ರಿಪೋರ್ಟ್ ಓದಿರಬಹುದೆಂದು ಭಾವಿಸುತ್ತೇನೆ.

ಇನ್ನು ನಮ್ಮ ತಾಲ್ಲೂಕಿನಲ್ಲಿ ರೇನ್ ಫಾಲ್ ತೆಗೆದಿರುವ ವಿಚಾರ ನೋಡಿದರೆ, ಈ ವಿಚಾರವಾಗಿ ನಾನು ಒಂದು ಪ್ರಶ್ನೆಯನ್ನು ಕಳುಹಿಸಿದ್ದೆ. ಮಿನಿಸ್ಟರುಗಳಿಗೆ ಅನೇಕ ಬಾರಿ ತಿಳಿಸಿದ್ದೇನೆ. ಇವರು ಬಂಡೀಪುರದ ಫಾರೆಸ್ಟ್‌ನಲ್ಲಿ, ಮತ್ತು ಒರಿಗೆ, ಹೊರೆಯಾಲ ಫಾರೆಸ್ಟ್ ಹತ್ತಿರ ಬೇಗೂರ್ ನಲ್ಲೂ ರೇನ್‌ಗೇಜಸ್ ಇಟ್ಟು ರೇನ್ ಫಾಲ್ ತೆಗೆದರೆ 20-28 ಇಂಚು ಮಳೆಯಾಗುತ್ತದೆ ಎಂದು ಹೇಳಿದರೆ ಬಯಲು ಪ್ರದೇಶದಲ್ಲಿ 12-15 ಇಂಚು ಮಳೆ ಆಗುವವರ ಗತಿ ಏನು ? ಇವರ ತಪ್ಪನ್ನು ಒಪ್ಪಿಕೊಳ್ಳದೆ ತಲೆಗೆಲ್ಲಾ ಒಂದೇ ಮಂತ್ರ ಹಾಕುವ ಇವರ ಮನೋಧರ್ಮ ಬದಲು ಮಾಡುವವರು ಯಾರು ?

ಇನ್ನು ಗ್ರೌಂಡ್‌ನಟ್, ಹಾರ್ಸ್ ಗ್ರಾಂ, ಕೋಕೋನಟ್ ಇವೆಲ್ಲಾ ಪ್ರಿನ್ಸ್‌ಪಲ್ ಕ್ರಾಪ್‌ನಲ್ಲಿ ಸೇರಿಸಿದ್ದಾರೆ. ಇದ್ದುದರಲ್ಲಿ ಒಂದು ತೆಂಗಿನ ಮರಕ್ಕೆ 70ರಿಂದ 100 ಕಾಯಿ ಲೆಕ್ಕ ಬೆಳೆಯುತ್ತ ದೆಂದು ಹೇಳಿದ್ದಾರೆ. ಅವರುಗಳೇ ಬೇಗೂರು ಹೋಬಳಿಯಲ್ಲಿರುವ ಭೂಮಿ ಬಹಳ ನಿಸ್ಸಾರವಾದ ಜಮೀನು, ಏತಕ್ಕೂ ಪ್ರಯೋಜನವಿಲ್ಲ ಎಂದು ಹೇಳಿ ತಿರುಗಿ ಮೇಲ್ಕಂಡಂತೆ ತೆಂಗು, ಹುರುಳಿ, ಸೇಂಗಾಯಿ ಲೆಕ್ಕ ಹೇಳಿದರೆ ರೈತರು ಬದುಕ ಬೇಕೆ ಇಲ್ಲ ಅಡಗಿ ಹೋಗಬೇಕೆ ಸರ್ಕಾರ ತಿಳಿಸಬೇಕು. ಇನ್ನು ಈ ತಾಲ್ಲೂಕಿನಲ್ಲಿ ಮೆಣಸಿನ ಬೆಳೆ ಬಹಳ ಚೆನ್ನಾಗಿದೆ ಎಂದು ಹೇಳಿದ್ದಾರೆ. ಮುಂದುವರೆದು ತೆರಕಣಾಂಬಿ ಸಂತೆಯಲ್ಲಿ ಹೋಗಿ ನೋಡಿದರೆ ಗೊತ್ತಾಗುತ್ತದೆ ಎಂದು ಹೇಳಿದ್ದಾರೆ. ಇದು ಯಾವ ಲೆಕ್ಕಾಚಾರ ? ಸಂತೆನೋಡಿ ತಾಲ್ಲೂಕಿನ ಬೆಳೆ ಹೇಳಲು ಸಾಧ್ಯವೇ ? ವ್ಯಾಪಾರಕ್ಕೆ ಎಲ್ಲಿಂದಲಾದರೂ ಸಾಮಾನು ಬರುತ್ತದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಆಫೀಸರ್ ರಿಪೋರ್ಟ್ ಇದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ರೈತರ ಮಕ್ಕಳಾಗಿ ಈ ವಿಷಯಗಳೆಲ್ಲವೂ ಕೂಡ ಅವರಿಗೆ ಗೊತ್ತಿದ್ದೂ ಅವರು ರೆಸಲ್ಯೂಷನ್ ಇಂಟ್ರೊಡ್ಯೂಸ್ ಮಾಡುತ್ತಾ ಇದನ್ನು ವಿರೋಧಿಸಿ ದವರು ದ್ರೋಹಿಗಳು ಎಂದು ಮಾನ್ಯ ಮಂತ್ರಿಗಳು ಹೇಳಿದರು. ಇದು ಯಾವ ಬಾಯಲ್ಲಿ ಹೇಳಿದರೋ ಗೊತ್ತಾಗುತ್ತಾ ಇಲ್ಲ. ಏನೂ ಗೊತ್ತಿಲ್ಲದ ರೈತನಿಗೆ ಯಾರು ಅನ್ಯಾಯ ಮಾಡು ತ್ತಾರೋ ಅವರು ದ್ರೋಹಿಗಳೇ ಹೊರತು ಬಾಕಿಯವರು ಯಾರೂ ಆಗುವುದಕ್ಕೆ ಸಾಧ್ಯವಿಲ್ಲ. ಕಂದಾಯ ಹಾಕದೇ ಹೋದರೆ ಹಣ ಎಲ್ಲಿಂದ ಬರಬೇಕು ಎನ್ನುವ ಪ್ರಶ್ನೆಯೂ ಬರುತ್ತದೆ. ನಾನಾ ದರೂ ಕೇಳುತ್ತೇನೆ ಇವರು ಖರ್ಚು ಮಾಡುವ ಹಣ ಎಲ್ಲಿಂದ ಬರುತ್ತದೆ ? ಆಕಾಶದಿಂದ ಏನಾದರೂ ಉದುರುತ್ತದೆಯೇ ? ದೇಶದಲ್ಲಿ 80 ಪರ್ಸೆಂಟ್ ಇರುವ ರೈತರು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಅವರೇ ಹಣ ಕೊಡಬೇಕು. ಅಕ್ಸ್ರೈಯ್, ಸೇಲ್ಸ್ ಟ್ಯಾಕ್ಸ್, ಅಗ್ರಿಕಲ್ಚರಲ್ ಟ್ಯಾಕ್ಸ್, ಇನ್‌ಕಂ ಟ್ಯಾಕ್ಸ್, ವಾಟರ್ ರೇಟ್, ಬೆಟರ್‌ಮೆಂಟ್ ಲೆವಿ, ಇರಿಗೇಷನ್ ಸೆಸ್, ಹೆಲ್ತ್ ಸೆಸ್, ಎಜ್ಯುಕೇಷನ್ ಸೆಸ್ ಹೀಗೆ ಮುಂತಾದ ಅನೇಕ ತೆರಿಗೆಗಳನ್ನು ಅವನು ಕೊಡಬೇಕು. ಇದೆಲ್ಲಾ ಲೆಕ್ಕಾಚಾರ ಹಾಕಿದರೆ ಒಂದು ರೂಪಾಯಿ ಕೊಡುವವನು 15ರಿಂದ 25 ರೂಪಾಯಿಗಳ ವರೆಗೂ ಕೊಡಬೇಕಾದ ಪರಿಸ್ಥಿತಿ ಬರುತ್ತದೆ. ಮಾತು ಮಾತಿಗೆ ನಮ್ಮ ರೈತರು ಬುದ್ಧಿವಂತರು, ನಾವು ಮಾಡಿದ್ದೆಲ್ಲಾ ಅವರ ಒಳ್ಳೆಯದಕ್ಕೆ ಎಂದು ಸರ್ಕಾರದವರು ಹೇಳುತ್ತಾರೆ. ಎಂತಹ ಐರಾನಿಕಲ್ ಸ್ಟೇಟ್‌ಮೆಂಟ್ ; ಪಾಪ ರೈತರು ಇವರು ಹೇಳುವ ಹಾಗೆ ಬುದ್ಧಿವಂತರು ಆಗಿದ್ದರೆ

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ

ಅದರ ತರಹವೇ ಬೇರೆ ಇತ್ತು. ಪಾಪ ಎಷ್ಟು ಭಾರ ಹೊರಿಸಿದರೂ ಮಾತಾಡದೆ ಹೊರುವ ಒಂದು ಪ್ರಾಣಿ ಇದೆಯಲ್ಲಾ, ನಮ್ಮ ರೈತ ಜನಾಂಗ ಇರುವವರೆಗೂ ಎಲ್ಲರಿಗೂ ಹಬ್ಬವೇ ಆಗಿದೆ. ನಮ್ಮ ತಾಲ್ಲೂಕಿನಲ್ಲಿ ಒರಿಜಿನಲ್ ಸೆಟ್ಲ್‌ಮೆಂಟ್ 1891ರಲ್ಲಿ ಆಯಿತು ನಂತರ 1926ರಲ್ಲಿ ರೀ ಸೆಟ್ಲ್‌ಮೆಂಟ್ ಆಗಿದೆ. 1963-64ರ ವರೆಗೆ ಯಾವ ಪ್ರಾಜೆಕ್ಟ್ ಕೊಟ್ಟಿದ್ದೀರಿ ಆ ತಾಲ್ಲೂಕಿನಲ್ಲಿ? ಏನೇನು ಅನುಕೂಲ ಮಾಡಿಕೊಟ್ಟಿದ್ದೀರಿ? ಅವರು ಕಂದಾಯ ಕೊಡುತ್ತಾ ಇರಲಿಲ್ಲವೇ? ಅವರಿಗೆ ಯಾವ ತರಹ ನ್ಯಾಯ ದೊರಕಿಸಿ ಕೊಟ್ಟಿದ್ದೀರಿ? ಈ ಸಮಯದಲ್ಲಿ ನಿಜವಾಗಿಯೂ ಶ್ರೀಮಾನ್ ವೀರಣ್ಣ ಗೌಡರನ್ನು ನೆನೆಸಿಕೊಳ್ಳಬೇಕು. ಅವರು ಒಂದು ಎರಡು ಮೂರು ಪ್ರಾಜೆಕ್ಟ್‌ಗಳನ್ನು ಮಂಜೂರು ಮಾಡಿದರು. ಇಲ್ಲದೇ ಇದ್ದರೆ ಜನ ಹೊಟ್ಟೆಗೆ ಇಲ್ಲದೆ ಸಾಯುತ್ತಾ ಇದ್ದರು.

ಶ್ರೀ ಎಂ. ವಿ. ಕೃಷ್ಣಪ್ಪ.—ವೀರಣ್ಣಗೌಡರೂ ನಮ್ಮವರೇ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇರಬಹುದು. ಆ ತಾಲ್ಲೂಕಿನ ಜನಕ್ಕೆ ಅಷ್ಟರವರೆಗೂ ಏನೂ ಮಾಡಿರಲಿಲ್ಲ ಎಂದು ಹೇಳುವುದಕ್ಕೆಹೇಳಿದೆ ಅಷ್ಟೆ.

ಇನ್ನು ಮಲ್ಬರಿ. ಇದು ತೋಟವೇ? ಮರವೇ? ಸಸಿಯೇ? ಒಂದೂ ಈ ರಿಪೋರ್ಟ್ ಬರೆದವರಿಗೆ ಅರ್ಥವಾಗಿಲ್ಲ ಎಂದು ನನಗೆ ಅನಿಸುತ್ತದೆ. 1-75 ಕಂದಾಯ ಇರುವುದು 12-75 ಪೈಸೆ ಆಗಿದೆ. ಈ ಇಂಡಸ್ಟ್ರೀಸ್‌ಗೆ ಆದಷ್ಟು ಉತ್ತೇಜನ ಕೊಡಬೇಕು. ಇದನ್ನು ಬಿಟ್ಟರೆ ಜನಕ್ಕೆ ಗತಿ ಇಲ್ಲ. ಆದ್ದರಿಂದ ಹದಿನಾರನೇಯ ಒಂದಕ್ಕೆ ಬದಲಾಗಿ ಇಪ್ಪತ್ತನೆಯ ಒಂದು ಮಾಡಬೇಕು ಎಂದು ಆ ಅಧಿಕಾರಿಯೇ ಹೇಳಿದ್ದಾರೆ. ಹೀಗೆ ಕಾಂಟ್ರಡಿಕ್ಟರಿ ರೆಕಮಂಡೇಷನ್ ಇರುವ ಈ ರಿಪೋರ್ಟು ಸ್ವಲ್ಪವೂ ಸರಿಯಲ್ಲ, ಶಾಸ್ತ್ರೋಕ್ತವಲ್ಲ ಎಂದು ಹೇಳುತ್ತೇನೆ. ಇದನ್ನೆಲ್ಲಾ ಸರಿಪಡಿಸುವುದಕ್ಕೋಸ್ಕರ ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡಬೇಕು. ವ್ಯವಸಾಯದ ಖರ್ಚನ್ನು ತಿಳಿಸಿದ್ದಾರೆ ಆದರೆ ಅದನ್ನು ಗೊತ್ತು ಮಾಡಿರುವುದು ಸರಿಯಾಗಿರುವಂತೆ ಕಂಡುಬರುವುದಿಲ್ಲ. ಆದುದರಿಂದ ಅದರ ಪರಿಶ್ರಮ ಸರಿಯಾಗಿರುವ ಆರ್ಕಿಯಲಾಜಿಕಲ್ ಡೈರೆಕ್ಟರ್ ಅಥವಾ ವ್ಯವಸಾಯದ ವಿಚಾರ ತಿಳಿದವರು ಆ ವಿಚಾರದಲ್ಲಿ ಎಕ್ಸ್‌ಪರ್ಟ್ ಯಾರಿದ್ದಾರೋ ಅವರನ್ನೆಲ್ಲಾ ಸೇರಿಸಿ ಒಂದು ಸಮಿತಿ ಮಾಡಿ ಸರಿಯಾದ ರೀತಿಯಲ್ಲಿ ಒಂದು ರೆಸಲ್ಯೂಷನ್ ತರಬೇಕೆಂದು ಹೇಳಿ ಇಷ್ಟು ಮಾತಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು).—ಮಾನ್ಯ ಸಭಾಪತಿಯವರೆ, ನಮ್ಮ ಸರಕಾರದವರು ಈ ಸಭೆಯ ಮುಂದೆ ಇಟ್ಟಿರುವ ಸೆಟ್ಲ್‌ಮೆಂಟಿಗೆ ಸಂಬಂಧಪಟ್ಟ ನಿರ್ಣಯದ ಬಗ್ಗೆ ಕೆಲವು ಮಾತುಗಳನ್ನು ಆಡಲು ಬಯಸುತ್ತೇನೆ. ದೇಶದ ಅಭಿವೃದ್ಧಿ ಕಾರ್ಯಗಳಿಗಾಗಿ ಆದಾಯವನ್ನು ಹೆಚ್ಚಿಸುವುದು ನ್ಯಾಯ. ಆದಾಯವಿಲ್ಲದೆ ಯಾವ ಅಭಿವೃದ್ಧಿಕಾರ್ಯಗಳನ್ನೂ ಮಾಡುವುದಕ್ಕಾಗುವುದಿಲ್ಲ ಎಂದು ಆಡಳಿತದ ಜವಾಬ್ದಾರಿ ಹೊತ್ತಿರುವವರು, ವಿರೋಧಪಕ್ಷದವರು ಮತ್ತು ನಾವೂ ಸಹ ಅರಿತಿದ್ದೇವೆ. ಆದರೆ ಆದಾಯವನ್ನು ಸಂಪಾದನೆ ಮಾಡುವಾಗ ಜನರಿಗೆ ತೆರಿಗೆಯನ್ನು ಕೊಡುವುದಕ್ಕೆ ಎಷ್ಟುಮಟ್ಟಿಗೆ ಶಕ್ತಿಯಿದೆ, ಜನರ ಆರ್ಥಿಕ ಪರಿಸ್ಥಿತಿ ಹೇಗಿದೆ ಎಂಬುದನ್ನು ಗಮನಿಸಿ ತೆರಿಗೆಯನ್ನು ವಸೂಲುಮಾಡುವುದರಿಂದ ಯಾರಿಗೂ ಸಹ ತೊಂದರೆಯಾಗಲಾರದು. ನಮ್ಮ ಅಧಿಕಾರಿಗಳು ಈ ರೆವೆನ್ಯೂ ಸೆಟ್ಲ್‌ಮೆಂಟ್ ವರದಿಯನ್ನು ಬಹಳ ಶ್ರಮಪಟ್ಟು ತಯಾರಿಸಿದ್ದಾರೆ. ಮಲೆನಾಡು ಜಿಲ್ಲೆಯಾದ ಚಿಕ್ಕಮಗಳೂರಿನ ಗುಡ್ಡಗಾಡು ಪ್ರದೇಶ ನದಿಗಳು, ಪರ್ವತ ಪ್ರದೇಶ ಮುಂತಾದ್ದೆಲ್ಲವನ್ನೂ ಗಮನಿಸಿ ಒಂದು ವರದಿಯನ್ನು ಸಿದ್ಧಮಾಡಿದ್ದಾರೆ. ಅದನ್ನು ಜವಾಬ್ದಾರಿಯುತವಾಗಿ ಮಾಡಿದ್ದಾರೆಂದು ಹೇಳಲು ಬಯಸುತ್ತಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಮುಖ್ಯವಾದ ಬೆಳೆ ಕಾಫಿ, ಬತ್ತ, ಏಲಕ್ಕಿ, ಅಡಿಕೆ, ಮೆಣಸು, ರಾಗಿ, ಜೋಳ. ಹೀಗೆ ದೇಶದಲ್ಲಿ ಬೆಳೆಯುವ ಎಲ್ಲಾ ಮುಖ್ಯ ಬೆಳೆಗಳನ್ನೂ ಒಳಗೊಂಡ ಜಿಲ್ಲೆ ಅದಾಗಿದೆ. ಸರ್ವೆ ಸೆಟ್ಲಮೆಂಟ್ ಅಧಿಕಾರಿಗಳು ನನ್ನ ಜಿಲ್ಲೆಯಲ್ಲಿ ಪ್ರವಾಸ ಮಾಡಿದಾಗ ಕಾಫಿ ಮುಂತಾದ್ದನ್ನು ಬೆಳೆಯುವ ಅನೇಕ ಬೆಳೆಗಾರರನ್ನು, ಬಾಳೆಹೊನ್ನೂರು ರಿಸರ್ಚ್ ಸ್ಟೇಷನ್ನಿನವರನ್ನು, ಕಾರ್ಡಮಮ್ ಸ್ಟೇಷನ್ನಿನವರನ್ನು ಭೇಟಿಮಾಡಿದ್ದಾರೆ. ಅಲ್ಲಿ ಕಂದಾಯ ಎಕರೆಗೆ ರೂ. 1-25ರಿಂದ 1-50ರ ವರೆಗಿದೆ. ಅದನ್ನೇಕೆ ಜಾಸ್ತಿ ಮಾಡಬಾರದೆಂದು ನನಗನ್ನಿಸಿತು. ಆದರೆ ರೈತರು ಕೊಡುವ ತೆರಿಗೆ, ಅಗ್ರಿಕಲ್ಚರಲ್ ಇನ್‌ಕಂ-ಟ್ಯಾಕ್ಸ್, ವಸತಿ ತೆರಿಗೆ, ಆದಾಯ ತೆರಿಗೆ, ಮಾರಾಟ ತೆರಿಗೆ ಮತ್ತು ಎಕರೆಗೆ ಖರ್ಚು ಮಾಡುವ 600ರಿಂದ 800 ರೂಪಾಯಿಗಳ ಹಣ ನೋಡಿದರೆ ಈಗ ಹಾಕಿರುವ ಕಂದಾಯ ಹೆಚ್ಚಿಸುವುದಕ್ಕೆ ಅವಕಾಶವಿಲ್ಲ, ಇದನ್ನು ಇತರರೂ ಹೇಳಿದ್ದಾರೆ. ರೈತರು ತಮಗಿರುವ ಸಂಪಾದನೆಯಿಂದ ಈಗ ಜೀವನ ಮಾಡುವುದೇ ಕಷ್ಟವಾಗಿದೆ. ಅಡಿಕೆ ಗಿಡ ಫಸಲಿಗೆ ಬರಬೇಕಾದರೆ 15 ವರ್ಷ

ಕಾಯಬೇಕು. ಅಲ್ಲಿಯವರೆಗೆ ಬೇಕಾದಷ್ಟು ಕಷ್ಟಪಡಬೇಕಾಗುತ್ತದೆ, ಅದನ್ನು ಪ್ರಸ್ತಾಪ ಮಾಡಿದ್ದಾರೆ. ನಮ್ಮ ಸರಕಾರದವರು ಸುಮಾರು 2-53 ರೂಪಾಯಿ ಕಂದಾಯವಿರುವುದಕ್ಕೆ 7 ರಿಂದ 10 ರೂಪಾಯಿ, 8 ರೂಪಾಯಿ ಇರುವುದಕ್ಕೆ 16 ರೂಪಾಯಿ, 12 ರೂಪಾಯಿಯಿರುವುದಕ್ಕೆ 67—68ರೂ ಹೀಗೆ ಹಾಕಬೇಕೆಂದು ಅಂದಾಜು ಮಾಡಿದ್ದಾರೆ. ಆದರೆ ರೈತರಿಗೆ ಇಷ್ಟನ್ನು ಹೊರುವ ಶಕ್ತಿ ಇದೆಯೆ, ಅವರ ಪರಿಸ್ಥಿತಿ ಏನಾಗಿದೆ ಎಂಬುದನ್ನು ಯೋಚನೆಮಾಡಬೇಕು. ಇದನ್ನು ಪುನರ್ವಿಮರ್ಶೆ ಮಾಡಬೇಕಾದ್ದು ಬಹಳ ಅಗತ್ಯ. ಈಗಾಗಲೆ ಮಾತನಾಡಿದವರು ರೈತನ ಬೆಳೆಯ ವೆಚ್ಚ ಮೂರು ರೂಪಾಯಿದ್ದುದು 50 ರೂಪಾಯಿ ಆಗಿದೆ ಎಂದು ಹೇಳಿದ್ದಾರೆ. ರೈತನ ಬೆಳೆ ತೆಗೆಯಲು ಆಗುವ ವೆಚ್ಚವೇನೆಂಬುದನ್ನು ತಿಳಿದು ಅವರ ಆದಾಯವೆಚ್ಚಕ್ಕನುಗುಣವಾಗಿ ಕಂದಾಯ ಹಾಕದೆ ಒಂದೇ ಸಾರಿ ಹೊರಲಾರದ ಹೊರೆ ಹೇರಿದರೆ ಖಂಡಿತ ವ್ಯವಸಾಯಾಭಿವೃದ್ಧಿಯಾಗುವುದಿಲ್ಲ ಮತ್ತು ದೇಶದ ಸಂಪಾದನೆಯೂ ಹೆಚ್ಚುವುದಿಲ್ಲ. ಆದುದರಿಂದ ಸರಕಾರ ಇದನ್ನು ಪುನರ್ವಿಮರ್ಶೆ ಮಾಡಬೇಕಾದ್ದು ಬಹಳ ಅಗತ್ಯ. ಮತ್ತು ಈಗ ಆಹಾರಧಾನ್ಯಗಳ ಉತ್ಪತ್ತಿ ಸಾಲದೆ ಆಹಾರ ಪರಿಸ್ಥಿತಿ ಬಹಳ ಕಠಿಣವಾಗಿದೆ. ಇದಕ್ಕೆ ಕಾರಣ ಸರಕಾರ ಎಂದು ತಿಳಿಯಬೇಕಾದ್ದು ಬಹಳ ಅವಶ್ಯಕ. ರೈತರ ಮನೆಯ ಮಕ್ಕಳು, ಅತನ ಹೆಂಡತಿ ಮುಂತಾದ ಮನೆಯವರೆಲ್ಲರೂ ಕೂಡ ಹೊಲದಲ್ಲಿ ಕೆಲಸಮಾಡುತ್ತಾರೆ. ಆದರೂ ಅವರ ಹೊಟ್ಟೆತುಂಬುವುದು ಕಷ್ಟ. ಹಾಗಿರುವಾಗ ಅವರು ಮುಂದೆ ಬತ್ತ, ರಾಗಿ ಬೆಳೆಯುವುದು ಬೇಡ ಹಣ ಬರುವ ಕಮರ್ಷಿಯಲ್ ಕ್ರಾಪ್ಸ್ ಬೆಳೆಯುವುದು ಉತ್ತಮ, ಮೈಕೈ ಏಕೆನೋವುಮಾಡಿಕೊಳ್ಳಬೇಕು ಎಂಬ ಭಾವನೆಬರಬಹುದು. ಅದಕ್ಕೆ ಅವಕಾಶಕೊಡಬಾರದು ಕಾಫಿ ಪ್ಲಾಂಟರೂ ಸಹ ಕಾಫಿ ಬೆಳೆಯುವುದಕ್ಕಿಂತ ಇಂಡಿಯನ್ ಕಾಫಿ ಬೋರ್ಡಿನಲ್ಲಿ ಕೆಲಸ ಮಾಡುವ ಜವಾನನ ಕೆಲಸ ಉತ್ತಮವೆಂದು ಹೇಳಿದರು. ಅವಿಧ್ಯಾವಂತರಾದ ರೈತರಿಗೆ ಅನೇಕ ವಿಷಯಗಳು ಅರ್ಥವಾಗುವುದಿಲ್ಲ, ಅವರು ಕಂದಾಯ ಹೆಚ್ಚು ಮಾಡಿದರೆ ಆಹಾರ ಪದಾರ್ಥಗಳನ್ನು ಬೆಳೆಯುವುದನ್ನು ಬಿಟ್ಟು ಬೇರೆ ಆದಾಯ ಹೆಚ್ಚು ಕೊಡುವ ಬೆಳೆಗಳನ್ನು ಬೆಳೆಯಲು ಪ್ರಾರಂಭಿಸಬಹುದು. ರೈತರಿಗೆ ಬಹಳ ತೊಂದರೆಗಳಿರುವಾಗ ಸರಕಾರ ಕಂದಾಯ ಜಾಸ್ತಿಮಾಡುವ ವಿಚಾರವನ್ನು ಪುನರ್ವಿಮರ್ಶೆ ಮಾಡುವುದು ಬಹಳ ಅಗತ್ಯವಾಗಿದೆ. ಪ್ರತಿ ಜಿಲ್ಲೆಗೂ ಪ್ರತ್ಯೇಕವಾಗಿ ಜಿಲ್ಲಾಧಿಕಾರಿಗಳಿಂದ ವರದಿ ತರಿಸಿ ಅದನ್ನು ಸರಕಾರ ಸಭೆಯ ಮುಂದಿಟ್ಟಿದ್ದರೆ ಚೆನ್ನಾಗಿತ್ತು. ಆಯಾ ಜಿಲ್ಲೆಯ ಜಿಲ್ಲಾಧಿಕಾರಿಯ ಅಭಿಪ್ರಾಯ, ರೈತರ ಮುಖಂಡರ ಅಭಿಪ್ರಾಯ ತಿಳಿದು ಸರಕಾರ ತನ್ನ ಅಭಿಪ್ರಾಯವನ್ನು ಕ್ರೋಢೀಕರಿಸಿದ್ದರೆ ಸರಿಯಾದ ನಿಲುವನ್ನು ತಳೆದಂತಾಗುತ್ತಿತ್ತು. ಹಾಗೆ ಮಾಡದೆ ಏಕಾಏಕಿ ಸುಮಾರು ಸೇಕಡ 500ರಷ್ಟು ಸೇಕಡ 2.300ರಷ್ಟು ಹೆಚ್ಚು ಕಂದಾಯ ಹಾಕಿದರೆ ರೈತರಿಗೆ ಕೊಡಲು ಶಕ್ತಿ ಇದೆಯೆ ಎಂಬದನ್ನು ಆಲೋಚನೆಮಾಡಬೇಕು. ಉಪ್ಪಹಳ್ಳಿ ಎಂಬ ಒಂದು ಗ್ರಾಮದಲ್ಲಿ 50 ಎಕರೆ ಸ್ಥಳದಲ್ಲಿ ನಾಲ್ಕು ಮಾವಿನ ಮರಗಳಿರುವುದನ್ನು ಗಾರ್ಡನ್ ಲ್ಯಾಂಡ್ ಎಂತ ಪರಿವರ್ತಿಸಿ ಎರಡು ರೂಪಾಯಿ ಕಂದಾಯವಿರುವುದಕ್ಕೆ 78 ರೂಪಾಯಿ ಹಾಕಿದರೆ ರೈತ ಅದನ್ನು ಹೇಗೆ ತಾನೆ ಕೊಡಬಲ್ಲ ? ಇದೊಂದು ಉದಾಹರಣೆ. ಇದನ್ನೆಲ್ಲಾ ಸರಿಯಾಗಿ ನೋಡದೆ ಸುಮ್ಮನೆ ದುಬಾರಿ ಕಂದಾಯ ವಿಧಿಸಿದರೆ ರೈತರಿಗೆ ಬಹಳ ತೊಂದರೆಯಾಗುತ್ತದೆಂಬುದನ್ನು ತಿಳಿಯಬೇಕು.

ಹಿಂದೆ ನಮ್ಮ ದೇಶದಲ್ಲಿ ಮುಖ್ಯವಾಗಿ ಭೂಕಂದಾಯವೇ ರಾಜಾದಾಯವಾಗಿರುತ್ತಿತ್ತು. ಅದರಿಂದಲೇ ದೇಶದ ಆಡಳಿತ ನಡೆಯುತ್ತಿತ್ತು. ಮೈಸೂರು ದೇಶ ಚಿಕ್ಕದಾಗಿದ್ದು ಎಂಟು-ಒಂಭತ್ತು ಜಿಲ್ಲೆಗಳಿದ್ದಾಗ ರಾಜಾದಾಯದಿಂದ ಅನೇಕ ಅಭಿವೃದ್ಧಿ ಕಾರ್ಯಗಳು ನಡೆದವು. ಸ್ವಾತಂತ್ರ್ಯ ಬಂದ ಮೇಲೆ ನೋಡಿದರೂ ಕೂಡ ಮೈಸೂರು ದೇಶ ಹಿಂದೂಸ್ಥಾನದಲ್ಲೇ ಬಹಳ ಪ್ರಗತಿಪರವಾದ ಮಾದರಿಯಾದ ದೇಶವಾಗಿದೆ. ಇದು ಎಲ್ಲರಿಗೂ ತಿಳಿದಿರುವ ವಿಷಯವೇ ಆಗಿದೆ. ಮೊಗಲರ ಮತ್ತು ಇಂಗ್ಲೀಷರ ಕಾಲದಲ್ಲಿಯೂ ಕೂಡ ಇದೇ ಪದ್ಧತಿ ಇತ್ತು. ಮಾನ್ಯ ಶ್ರೀ ಕೃಷ್ಣಪ್ಪನವರು ಹೇಳಿದ ಹಾಗೆ ರಾಜಾ ತೋದರ ಮಲ್ಲನ ಕಾಲದಲ್ಲಿ ಭೂಮಿಯ ಆದಾಯದಲ್ಲಿ ಒಂದು ಭಾಗವನ್ನು ತೆಗೆದುಕೊಂಡು ದೇಶದ ಅಭಿವೃದ್ಧಿ ಕಾರ್ಯಗಳಿಗೆ ಅದನ್ನು ಉಪಯೋಗಿಸುತ್ತಿದ್ದನು. ಈ ಪದ್ಧತಿ ಹಿಂದಿನಿಂದಲೂ ಈ ದೇಶದಲ್ಲಿತ್ತು. ಮಾನ್ಯ ರೆವೆನ್ಯೂ ಮಂತ್ರಿಗಳು ಹೇಳಿದರು : ಈಗ ರೈತನು ಕೊಡತಕ್ಕ ಕಂದಾಯದಲ್ಲಿ ನೂರರಲ್ಲಿ 30 ಭಾಗ ಪಂಚಾಯಿತಿಗೂ, 30 ಭಾಗ ತಾಲ್ಲೂಕು ಬೋರ್ಡಿಗೂ ಮತ್ತು 10 ಭಾಗ ಜಿಲ್ಲಾ ಪರಿಷತ್ತಿಗೂ ಹೋಗುವುದರಿಂದ ರೈತ ಕೊಡತಕ್ಕ ಕಂದಾಯವನ್ನು ರೈತನಿಗೇ ಕೊಡುತ್ತೇವೆ ಎಂದು. ರೈತನು ಕೊಡತಕ್ಕ ಕಂದಾಯ ಮೂರೂವರೆ ಕೋಟಿ ರೂಪಾಯಿ ಎಂದು ಅವರೇ ಹೇಳಿದ್ದಾರೆ. ರಾಜ್ಯದಲ್ಲಿ ನೂರಕ್ಕೆ 80 ಭಾಗ ಇರತಕ್ಕ ರೈತ ಜನಾಂಗವೇನಿದೆ ಅದರ ಮೇಲೆ ಕಂದಾಯ ಸೆಸ್ ವಗೈರೆ ಏನೇ ಹಾಕಲಿ ಅದೆಲ್ಲ ಬೀಳುತ್ತದೆ. ಯಾವುದೇ ತೆರಿಗೆಯನ್ನು ಯಾವುದೇ ವಸ್ತುವಿನ ಮೇಲೆ ಹಾಕಿದರೂ ಕೂಡ ಅದು ರೈತನ ಮೇಲೆಯೇ ಬೀಳುತ್ತದೆ. ಇದರಿಂದ ನೂರಕ್ಕೆ 80 ಭಾಗ ಇರತಕ್ಕ ರೈತರ ಮೇಲೆ ತಲೆ ಎತ್ತಲಾರದಂಥ ಒಂದು ಹೊರೆಯನ್ನು ಒಂದೇ ಸಾರಿ ಹಾಕುವುದರಿಂದ ಬಹಳ ತೊಂದರೆಯಾಗುತ್ತದೆ. ದೇಶದಲ್ಲಿ ಆಹಾರದ ಪದಾರ್ಥಗಳ ಬೆಲೆ ಮತ್ತು ಬೇರೆ ಪದಾರ್ಥಗಳ ಬೆಲೆ

(ಶ್ರೀಮತಿ ಬಿ. ಎಲ್. ಸುಬ್ಬಮ್ಮ)

ಏರಿರುವಾಗ ರೈತ ತನ್ನ ಕಾಲ ಮೇಲೆ ತಾನು ನಿಂತುಕೊಳ್ಳತಕ್ಕ ಅವಕಾಶವನ್ನು ರೈತನಿಗೆ ಸರ್ಕಾರ ಮಾಡಿಕೊಡಬೇಕು. ರೈತರಿದ್ದರೆ ಸರ್ಕಾರ, ಸರ್ಕಾರವಿದ್ದರೆ ರೈತ. ರೈತರ ಸರ್ಕಾರವೇ ರೈತರ ಹಿತವನ್ನು ಖಂಡಿತವಾಗಿಯೂ ನಿರ್ಲಕ್ಷಿಸಬಾರದು. ಇದಕ್ಕೆ ಎಲ್ಲ ತಜ್ಞರ ಅಭಿಪ್ರಾಯಗಳನ್ನೂ ತೆಗೆದುಕೊಂಡು ಯಾವ ರೀತಿಯಲ್ಲಿ ಕಂದಾಯನ್ನು ಹಾಕಿದರೆ ರೈತರಿಗೆ ತೊಂದರೆ ಯಾಗಲಾರದು ಮತ್ತು ಸರ್ಕಾರ ಆಯವ್ಯಯವನ್ನು ತೂಗಿಸಬಹುದು ಎನ್ನುವುದನ್ನು ಪರಿಶೀಲನೆ ಮಾಡಬೇಕಾದುದು ಬಹಳ ಮುಖ್ಯವಾದುದು ಎಂದು ನಾನು ಸೂಚಿಸುತ್ತೇನೆ.

ರೈತನ ಸಂಪಾದನೆಯನ್ನು ತೆಗೆದುಕೊಳ್ಳುವಾಗ ಒಟ್ಟು ಸಂಪಾದನೆ (ಗ್ರಾಸ್ ಇನ್‌ಕಮ್) ಹಾಕಿದ್ದಾರೆ. ರೈತನು ತಾನು ಮಾಡತಕ್ಕ ಕೆಲಸಕ್ಕೆ ಕೂಲಿ ಏನು ಬೀಳುತ್ತದೆ ಅದನ್ನು ತನ್ನ ಖರ್ಚನ್ನು ಎಲ್ಲ ಕಳೆದು ಉಳಿಯುವ ನಿವ್ವಳ ವರಮಾನದ ಮೇಲೆ ಲೆಕ್ಕ ಹಾಕಿದರೆ ಅದನ್ನು ಎಲ್ಲರೂ ಸ್ವಾಗತಿಸುತ್ತಾರೆ. ಆದುದರಿಂದ ಇದನ್ನು ಸರ್ಕಾರ ಪುನರ್ಪರಿಶೀಲಿಸಬೇಕೆಂದು ನಾನು ತಿಳಿಸುತ್ತಿದ್ದೇನೆ.

ನಮ್ಮ ಸರ್ಕಾರ ಮತ್ತು ಕೆಲವು ಮಾನ್ಯ ಸದಸ್ಯರ ದೃಷ್ಟಿಯಲ್ಲಿ ಏನಾಗಿದೆ ಎಂದರೆ ಬತ್ತ, ರಾಗಿ ಇವುಗಳನ್ನು ಬೆಳೆಯುವ ರೈತರ ಪರಿಸ್ಥಿತಿ ಎಲ್ಲ ಕೆಟ್ಟಿದೆ ಮತ್ತು ಅಡಕೆ, ಕಾಫಿ ಇಂಥವುಗಳನ್ನು ಬೆಳೆಯುವವರು ಚೆನ್ನಾಗಿದ್ದಾರೆ ಎನ್ನುವ ಅಭಿಪ್ರಾಯವಿದೆ. ಇದನ್ನು ಬಗೆಹರಿಸಬೇಕಾದರೆ ಈ ಸೆಟಲ್‌ಮೆಂಟ್ ರಿಪೋರ್ಟಿನಲ್ಲಿ ಚಿಕ್ಕಮಗಳೂರಿಗೆ ಸಂಬಂಧಪಟ್ಟಂತೆ ಕೊಟ್ಟಿರುವ ಪುಸ್ತಕದಲ್ಲಿ ಕಾಣಬಹುದು. ಕಾಫಿ ಪ್ಲಾಂಟರುಗಳ ಗತಿ ಏನಾಗಿದೆ ಎಂದರೆ ಎಷ್ಟೋ ಜನ ಪ್ಲಾಂಟರುಗಳು ತಮ್ಮ ಆಸ್ತಿಯನ್ನು ಮಾರವಾಡಿಗಳಲ್ಲಿ ಮತ್ತು ಬ್ಯಾಂಕುಗಳಲ್ಲಿ ಅಡವಿಟ್ಟಿದ್ದಾರೆ. ಅವರ ಸ್ಥಿತಿ ತುಂಬ ಶೋಚನೀಯವಾಗಿದೆ. ಸುಮಾರು ಮೂರು ಲಕ್ಷ ಕೂಲಿಯವರು ಕೇರಳ ಮತ್ತು ಇತರ ಕಡೆಗಳಿಂದ ಬಂದು ಅಲ್ಲಿ ಜೀವನ ಮಾಡುತ್ತಿದ್ದಾರೆ. ಇಂಥ ಒಂದು ದೊಡ್ಡ ಉದ್ಯಮವಾಗಿರುವ ಕಾಫಿ ಬೆಳೆಯಲ್ಲಿ ಮೈಸೂರು ದೇಶದಲ್ಲಿ ವ್ಯವಸಾಯ ತೆರಿಗೆಯನ್ನು ಕೊಡುವುದರಲ್ಲಿ ಮೊದಲನೆಯದು ಕೊಡಗು ಜಿಲ್ಲೆ ಎರಡನೆಯದು ಚಿಕ್ಕಮಗಳೂರು ಜಿಲ್ಲೆ. ಹೀಗಿರುವಾಗ ಅವರ ಮೇಲೆ ಕಂದಾಯವನ್ನು ವಿಪರೀತವಾಗಿ ಹೆಚ್ಚು ಮಾಡುವುದರಿಂದ ಬಹಳ ಹಾನಿ ಆಗುತ್ತದೆ. ಕಾಫಿ ಬೆಳೆಯುವವರು ಅಡಿಕೆ ಬೆಳೆಯುವವರೂ ಆಹಾರ ಧಾನ್ಯಗಳನ್ನು ಬೆಳೆಯುವವರಿಗಿಂತ ಹೆಚ್ಚು ಸಂಪಾದನೆಯನ್ನು ಮಾಡುತ್ತಿಲ್ಲ. ಸರ್ಕಾರವನ್ನು ನಡೆಸತಕ್ಕವರೂ, ರೈತ ಮಕ್ಕಳೂ ಆದ ರೈತರ ವಿಚಾರದಲ್ಲಿ ಹೆಚ್ಚು ಅನುಭವವುಳ್ಳ ಮಾನ್ಯ ರೆವಿನ್ಯೂ ಮಂತ್ರಿಗಳು ಸ್ವಲ್ಪ ಮನಸ್ಸು ಮಾಡಿ ಅನುಕೂಲ ಮಾಡಿದರೆ ರೈತರಿಗೆ ಸ್ವಲ್ಪ ಕಿರುಕುಳ ತಪ್ಪುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ಮಾನ್ಯ ಕಂದಾಯ ಮಂತ್ರಿಗಳು ಸರ್ವೆ ಸೆಟಲ್‌ಮೆಂಟ್ ಬಗ್ಗೆ ಉತ್ತಮವಾದ ಕೆಲವು ಸಾಹಿತ್ಯಗಳನ್ನು, ವಿಷಯಗಳನ್ನೂ ಒದಗಿಸಿಕೊಂಡು ಅದರ ಬಗ್ಗೆ ಪುನರ್ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

> "The coffee planters, though for all outward appearance seem to pay a flat rate of Rs. 1.25 and 1.50 per acre of plantation, in reality they pay very heavily. They are paying an excise duty, on coffee to the Central Government, which is deducted at source before payment to the planters. An excise duty of Rs. 55 per quintal is being levied and taking the average yield at 4 quintals per acre an amount exceeding Rs. 200 per acre is paid towards excise duty itself. Besides the planters are subjected to Agricultural Income-tax. If we take into consideration all these we see that the planters are heavily taxed already. Their expenditure too is very heavy. They spend between Rs. 600 to 800 annually per acre for a running plantation. They have to maintain labour as per labour rules and provide for housing, medical and other facilities."

ಎಂದು ಅವರು ಹೇಳಿದ್ದಾರೆ. ಮೊದಲು ರೂ.2-53 ಇದ್ದುದನ್ನು ಈಗ ರೂ. 7-15, ರೂ. 8-70 ಇದ್ದುದನ್ನು 16-13, ರೂ. 12 ಇದ್ದುದನ್ನು 67-65 ಹೀಗೆ ಹೆಚ್ಚು ಮಾಡಿದ್ದಾರೆ. ಇದನ್ನು ಲೆಕ್ಕ

ಹಾಕಿಕೊಂಡದೆ ಅದು ಸೇಕಡಾವಾರು ಪ್ರಮಾಣ ಎಷ್ಟಾಗುತ್ತದೆ ಎನ್ನುವುದು ಗೊತ್ತಾಗುತ್ತದೆ. ಆದುದರಿಂದ ಸರ್ಕಾರದವರು ಈ ವಿಷಯದಲ್ಲಿ ಪುನರ್ಪರಿಶೀಲನೆ ಮಾಡಬೇಕೆಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಉಪಯೋಗಿಸುತ್ತೇನೆ.

†ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ಸ್ವಾಮಿ, ಈ ಸಭೆಯ ಮುಂದೆ ಮಾನ್ಯ ಕಂದಾಯ ಮಂತ್ರಿಗಳು ತಂದಿರುವ ಕಂದಾಯದ ಪುನರ್ವಿಮರ್ಶೆಗೆ ಸಂಬಂಧಪಟ್ಟ ನಿರ್ಣಯವೇನಿದೆ ಅದು 17 ವರ್ಷಗಳ ಕಾಂಗ್ರೆಸ್ ಆಡಳಿತೆಯಲ್ಲಿ ಈ ರಾಜ್ಯದ ಬಹು ಸಂಖ್ಯಾತ ಜನರಿಗೆ ಕೆಟ್ಟ ಪ್ರತಿಕ್ರಿಯೆಯನ್ನು ತೋರಿಸುವಂಥ ಕರಾಳ ಶಾಸನವಾಗಿದೆ ಎಂದು ಈ ಸಭೆಯಲ್ಲಿ ಹೇಳುತ್ತೇನೆ. ಇದು ಈ ರಾಜ್ಯದ 170 ಲಕ್ಷ ರೈತರ ಸಾಮೂಹಿಕ ದರೋಡೆಯಾಗಿದೆ ಎಂದು ನಾನಾದರೂ ಹೇಳುತ್ತೇನೆ.

ಸ್ವಾಮಿ, ಮಾನ್ಯ ಕಂದಾಯ ಮಂತ್ರಿಗಳು ಈ ಮಾನ್ಯ ಸಭೆಯಲ್ಲಿ ತಂದಿರುವ ಸರ್ವೆ ಸೆಟಲ್‌ಮೆಂಟ್ ರಿಪೋರ್ಟ್ ಏನಿದೆ ಅದನ್ನು ನ್ಯಾಯಕ್ಕೂ, ಕಾನೂನಿಗೂ ಬಾಹಿರವಾಗಿ ತಂದಿದ್ದಾರೆ. ರೀ ಸೆಟಲ್‌ಮೆಂಟ್ ಮಾಡುವಾಗ ಹಿಂದಿನಿಂದಲೂ ಸಾಧಾರಣ 30 ವರ್ಷಗಳ ಅವಧಿಯಲ್ಲಿ ಏನು ಬೆಳೆ ಬೆಳೆಯುತ್ತಾರೆಯೋ ಅದರ ಧಾರಣೆವಾಸಿಗಳ ಮೇಲೆ ಕಂದಾಯವನ್ನು ನಿಗದಿ ಮಾಡಬೇಕಾಗಿತ್ತು. ಮಾನ್ಯ ಮಂತ್ರಿಗಳು ಹೇಳಿದರು 9 ವರ್ಷ ಕಾಲ ಸರ್ವೆಮಾಡಿ ಕಂದಾಯವನ್ನು ಪುನರ್ವಿಮರ್ಶೆ ಮಾಡಿದ್ದೇವೆ ಎಂದು. ಸ್ವಾಮಿ, ತಮ್ಮ ಗಮನಕ್ಕೆ ನಾನು ಒಂದು ವಿಷಯವನ್ನು ತರುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1963ನೇ ನವೆಂಬರ್ ತಿಂಗಳ 23ನೇ ತಾರೀಖು ಸರ್ವೆ ಸೆಟಲ್‌ಮೆಂಟ್ ಕಾರ್ಯಕ್ರಮವನ್ನು ಷುರುಮಾಡಿ 1964ನೇ ಮಾರ್ಚಿ ತಿಂಗಳು ಎರಡನೆಯ ತಾರೀಖು, ಎಂದರೆ, ಮೂರು ತಿಂಗಳ ಅವಧಿಯಲ್ಲಿ ಸರ್ವೆ ಸೆಟಲ್‌ಮೆಂಟ್ ಅಧಿಕಾರಿಗಳು ತಾಲ್ಲೂಕುಗಳಿಗೆ ಬಂದು ಅಲ್ಲಿಯ ಪ್ರವಾಸಿ ಮಂದಿರಗಳಲ್ಲಿ ಕುಳಿತುಕೊಂಡು ಊರಿನ ಶ್ಯಾನುಬೋಗರನ್ನೂ ಇನ್ನು ಇತರ ಗ್ರಾಮ ಸೇವಕರನ್ನೂ ಕರೆಸಿಕೊಂಡು ಈ ಸರ್ವೆ ಸೆಟಲ್‌ಮೆಂಟ್ ಕಾರ್ಯಕ್ರಮವನ್ನು ಮಾಡಿದ್ದಾರೆ ಎಂದು ನಾನು ತಮ್ಮ ಗಮನಕ್ಕೆ ತರುತ್ತೇನೆ, ಈಗ ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ತುಂಬ ಅನ್ಯಾಯವಾಗಿದೆ ಮಾತ್ರವಲ್ಲದೆ ಕಾನೂನಿಗೂ ಬಾಹಿರವಾದ ಸರ್ವೆ ಸೆಟಲ್‌ಮೆಂಟ್ ಕಾರ್ಯಕ್ರಮ ನಡೆದಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1905ನೇ ಇಸವಿ ಸುಮಾರಿನಲ್ಲಿ ಆಗಿದ್ದ ಇಂಗ್ಲಿಷ್ ಸರ್ಕಾರದಿಂದ ಸರ್ವೆ ಸೆಟಲ್‌ಮೆಂಟ್ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದರು. ಅವಾಗ 8-9 ವರ್ಷಗಳು ಸೂಕ್ಷ್ಮವಾಗಿ ಭೂಮಿಯನ್ನು ಪರೀಕ್ಷೆ ಮಾಡಿ, ಇಂಟೆನ್ಸಿವ್ ಸರ್ವೆ ಮಾಡಿ ಕಂದಾಯವನ್ನು ನಿಷ್ಕರ್ಷೆ ಮಾಡಿದರು. ಆ ಮೇಲೆ 1934 ರಲ್ಲಿ ಉಪಾಯವಿಲ್ಲದೆ ಕಂದಾಯವನ್ನು ಜಾಸ್ತಿ ಮಾಡಿದರು. ಆಗ ಅವರು ಹೇಳಿದರು : ನಮಗೆ ದುಡ್ಡಿನ ತಾಪತ್ರಯ ಜಾಸ್ತಿ ಇದೆ, ನಿಜವಾಗಿಯೂ ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಭೂಕಂದಾಯವನ್ನು ಏರಿಸುವುದು ತಪ್ಪು, ಆದರೂ ನಿರ್ವಾಹವಿಲ್ಲದೆ ರೂಪಾಯಿಗೆ ಎರಡಾಣೆಯನ್ನು ನಾವು ಜಾಸ್ತಿ ಮಾಡುತ್ತೇವೆಂದು ಹೇಳಿದ್ದು ಮಾತ್ರವಲ್ಲದೆ ಆಗಿನ ಸರ್ಕಾರ ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಇನ್ನು ಮುಂದೆ ಯಾವರೀತಿಯಲ್ಲಿಯೂ ಭೂಕಂದಾಯವನ್ನು ಏರಿಸುವುದಿಲ್ಲ ಎಂದು ಭಾಷೆಯನ್ನು ಕೊಟ್ಟಿದ್ದಾರೆ.

5-00 P.M.

While enforcing the full recovery of the assessment according to the sanctioned resettlement of 1934-35, the former Madras Government declared in 1937 as a matter of policy that there will be no further revision settlement and that the rates there in force will not be enhanced. ಆಗಿನ ಮದ್ರಾಸ್ ಸರ್ಕಾರ 1934ನೇ ಇಸವಿಯಲ್ಲಿ ದಕ್ಷಿಣ ಕನ್ನಡ ಜಿಲ್ಲಾಮಟ್ಟಿಗೆ ಭೂಕಂದಾಯ ಏರಿಸುವುದಿಲ್ಲವೆಂದು ಹೇಳಿದ್ದು, ಅದೇ ಕರ್ಣಾಟಕದ್ದು ಪಾಲಿಸಿ ಎಂಬುದಾಗಿ ವರದಿಯಲ್ಲಿ ಕೊಟ್ಟಿದ್ದಾರೆ. ಈಗ ನಮಗೆ ಮದ್ರಾಸ್‌ನಿಂದ ಮೈಸೂರಿಗೆ ಬಂದಿದ್ದೇ ತಪ್ಪಾಗಿದೆ. ಈ ಸರ್ಕಾರವೆಲ್ಲಾ ಇವರದ್ದೇ ಆಗಿದೆ. ಬಿಳೀ ಟೋಪಿಯವರ ಸರ್ಕಾರ ಮಾಡಿದ ಕಾನೂನನ್ನು ಇವರೇ ಒಪ್ಪುವುದಿಲ್ಲ. ಇದು ಇವರ ಯಾವ ನೀತಿಯೋ ನನಗೇ ಗೊತ್ತಾಗಲಲ್ಲ.

ಇನ್ನೊಂದು ವಿಷಯ. ನಮ್ಮ ಊರಿನಲ್ಲಿರುವ ಸ್ಥಳವೆಲ್ಲಾ ಶ್ರೀಮಾನ್ ಕೃಷ್ಣಪ್ಪನವರಿಗೆ ಗೊತ್ತಿದೆ. ಅಲ್ಲಿ ಒಂದು ಕಡೆ ಮಹಮ್ಮಾರಿ ಪ್ರೇತ ಅಥವಾ ಭೂತವೆಂದಿದೆ. ಸಾಧುಪ್ರಾಣಿಗಳಾದ ಕುರಿ, ಕೋಣ, ಆಡು ಮುಂತಾದ ಪ್ರಾಣಿಗಳನ್ನು ಅಲ್ಲಿ ಬಲಿ ಕೊಡುತ್ತಾರೆ ಹೀಗೆ ದಕ್ಷಿಣ ಕನ್ನಡದಲ್ಲಿರುವ ಈ ಮಹಮ್ಮಾರಿಗೆ ಆ ಪ್ರಾಣಿಗಳು ಬಲಿಯಾಗುತ್ತಿರುವ ಹಾಗೆ ಆ ಮಹಮ್ಮಾರಿಯಾದ ಈ

(ಶ್ರೀ ಬಿ. ಭಾಸ್ಕರ ಶೆಟ್ಟಿ)

ಸರ್ಕಾರಕ್ಕೆ ಸಾಧುಪ್ರಾಣಿಗಳಂತಿರುವ ರೈತರು ಬಲಿಯಾಗಬೇಕಾಗಿದೆಯೆಂದು ನಾನು ಹೇಳುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಗೆ ಕಟ್ಟಕಡೆಯದಾಗಿ ಗತಿ ಇಲ್ಲದೆ ಏರಿಸಿದ ಭೂಕಂದಾಯವೆಂದರೆ, ಶೇಕಡ ಹನ್ನೆರಡೂವರೆ ಭಾಗದಷ್ಟಾಗಿದೆ. ಈಗ ಇವರು ಈ ವಿಚಾರವನ್ನು ನೋಡತಕ್ಕದ್ದರಲ್ಲಿ ಬಹಳ ವಿಚಿತ್ರವಾಗಿ ತೋರುತ್ತದೆ. ಅಲ್ಲಿ ಜೂನ್ 1 ರಲ್ಲಿ ವೆಟ್ ಲ್ಯಾಂಡ್‌ಮಟ್ಟಿಗೆ ಗ್ರೂಪ್ ಒಂದಕ್ಕೆ 8.44 ರೂಪಾಯಿಗಳು ಇದ್ದುದನ್ನು 14.75 ರೂಪಾಯಿ ಗಳಿಗೆ ಅಂದರೆ ಶೇಕಡ 75ರಷ್ಟು ಏರಿಸಿದ್ದಾರೆ. ಗ್ರೂಪ್ 2 ರಲ್ಲಿ 7.4 ಇದ್ದುದನ್ನು 13·45ಕ್ಕೆ ಏರಿಸಿದ್ದಾರೆ. ಇನ್ನು ಗಾರ್ಡನ್ ಲ್ಯಾಂಡಿಗೆ ಶೇಕಡ 78 ರಷ್ಟು ಏರಿಸಿದ್ದಾರೆ. ಇನ್ನೂ ಮುಂದೆ ಹೋದರೆ ಅಡಿಕೆ ಬೆಳೆ ಏನಿದೆ ಇದರಲ್ಲಿ ಬಹಳ ಕಠಿಣತರವಾದ ಧೋರಣೆಯನ್ನು ವಹಿಸಿದ್ದಾರೆ. ಅಡಿಕೆಯಮೇಲೆ ಅವರು ಹೆಚ್ಚಿನ ಕಂದಾಯವನ್ನು ಏರಿಸಿದ್ದಾರೆ. ಈ ಸಭೆಯ ಮಹಿಳಾ ಸದಸ್ಯರಾದ ಶ್ರೀಮತಿ ಸುಬ್ಬಮ್ಮನವರು ಈ ವಿಷಯವಾಗಿ ಬಹಳ ಚೆನ್ನಾಗಿ ಹೇಳಿದ್ದಾರೆ. ಅಡಿಕೆ ಶೇಕಡ 800ರಷ್ಟು ಬೆಲೆ ಜಾಸ್ತಿಯಾಗಿದೆ. ಇದನ್ನು ಕೇಳುವವರಿಗೆ ಒಂದು ತರಹ ವಿಚಿತ್ರವಾದೀತೆಂದು ನಾನು ಹೇಳುತ್ತೇನೆ. ಅಡಿಕೆಮಟ್ಟಿಗೆ ಕಂದಾಯ ಹಿಂದೆ 9 ರೂಪಾಯಿ ಇದ್ದುದನ್ನು 120.11 ರೂಪಾಯಿಗೆ ಏರಿಸಿದರೆ ಅದು ಶೇಕಡ 1,246.67 ರಷ್ಟಾಗುತ್ತದೆ. ಇಂತಹ ಭೂಕಂದಾಯವನ್ನು ಯಾವ ಕಾಲದಲ್ಲೂ ಏರಿಸಲಿಲ್ಲ. ಇದು ಇವರ ಅಕೃತ್ಯದ ಪರಮಾವಧಿ ಎಂಬು ದಾಗಿ ಹೇಳಿದರೆ ತಪ್ಪಾಗಲಾರದು ಎಂದು ನಾನು ಹೇಳುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪ.—ನಾನೇನೂ ಆ ರೀತಿ ಏರಿಸಿಲ್ಲ. ಲೆಕ್ಕದ ಪ್ರಕಾರ ಶೇಕಡ ಆರೂಕಾಲ ರಷ್ಟು ಏರಿದೆ. ಏಕೆಂದರೆ ಅಡಿಕೆ ಬೆಳೆಯಲ್ಲಿ ಬಹಳ ಉತ್ಪತ್ತಿ ಇದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈ ವಿಚಾರದಲ್ಲಿ ನನಗೆ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಹಿಂದೆ ಔರಂಗಜೇಬನ ಕಾಲದಲ್ಲಿ ಜೆಸಿಯಾ ಎಂಬ ತಲೆಗಂದಾಯವನ್ನು ಹಾಕುತ್ತಿದ್ದರು. ಅದು ನನಗೆ ಈಗ ನೆನಪಿಗೆ ಬರುತ್ತದೆ. ಈ ಖಾದೀ ಟೋಪಿಗಳ ಈ ಸರ್ಕಾರದ ಆಡಳಿತದಲ್ಲಿ 1 ಕೋಟಿ 70 ಲಕ್ಷ ರೂಪಾಯಿಗಳನ್ನು ರೈತರ ಮೇಲೆ ವಿಧಿಸಿ ಈ ಕಂದಾಯವನ್ನು ತಲೆ ಗಂದಾಯದ ಹಾಗೆ ಇವರು ವಸೂಲುಮಾಡಬೇಕೆಂದಿದ್ದಾರೆ. ಖಾದಿ ಟೋಪಿಯವರಿಗೆ ರಕ್ಷಣೆ ಬೇಕೆಂದು ಈ ರೀತಿ ಮಾಡು ತ್ತಿದ್ದಾರೆ. ಎಲ್ಲಾ ಕಡೆಗಳಿಂದಲೂ ಸುಮ್ಮನೆ ಈ ತೆರಿಗೆಗಳು ಪರೋಕ್ಷವಾಗಿ ರೈತರ ಮೇಲೆಯೇ ಬೀಳುತ್ತದೆ. ರೈತರಿಗೆ ಎಲ್ಲಾ ರೀತಿಯ ಕಂದಾಯಗಳನ್ನೆಲ್ಲಾ ಏರಿಸಿದ್ದಾರೆ. ಇತರರಿಗೆ ಯಾವ ರೀತಿಯ ತೆರಿಗೆಗಳನ್ನು ವಿಧಿಸುತ್ತಾರೋ ಅವನ್ನು ಪರೋಕ್ಷವಾಗಿ ರೈತರ ಮೇಲೆ ಬೀಳುವಂತೆ ಕಂದಾಯಗಳನ್ನು ಈಗ ಹಾಕುತ್ತಿದ್ದಾರೆ. ದೊಡ್ಡದೊಡ್ಡ ವ್ಯಾಪಾರಸ್ಥರೇ ಅಧಿಕಾರಿಗಳಿಗೆ 99 ಲಕ್ಷ ರೂಪಾಯಿಗಳನ್ನು ಕೊಟ್ಟು ಈ ರೀತಿ ಕಂದಾಯಗಳನ್ನು ಏರಿಸಿದ್ದಾರೆ. ಅಂತಹವರ ಶಕ್ತಿ ಇವರಿಗೆಲ್ಲಾ ಬೇಕು. ಅದಕ್ಕೆ ಸಂಬಂಧಪಟ್ಟ ಪುಸ್ತಕಗಳನ್ನು ಎಲ್ಲೋ ಅಡಗಿಸಿರುತ್ತಾರೆ. ಅದ ರಿಂದಾಗಿಯೇ ಇವರ ಭಂಡಾರ ಖಾಲಿಯಾಗಿದೆ, ಈಗ ಮೂರುವರೆ ಕೋಟಿ ರೂಪಾಯಿಗಳ ಹೆಚ್ಚಿನ ಕಂದಾಯ ಹೇರಿ ರೈತರಿಂದ ವಸೂಲುಮಾಡುತ್ತೇವೆಂದು ಹೇಳಿದ್ದಾರೆ. ಮೈಸೂರು ರಾಜ್ಯದಲ್ಲಿ ಮುಖ್ಯವಾಗಿ ಇತರ ಬಾಬುಗಳಿಂದ ಎಷ್ಟೋ ಕೋಟಿರೂಪಾಯಿಗಳು ಬರಬೇಕಾಗಿದೆ. ಅದನ್ನು ಇವರು ಏಕೆ ವಸೂಲುಮಾಡಲಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಸರ್ಕಾರಕ್ಕೆ ಸಾಧಾರಣವಾಗಿ ಎರಡೂವರೆ ಕೋಟಿ ರೂಪಾಯಿಗಳ ತನಕ ಮಾರಾಟತೆರಿಗೆ ಮತ್ತು ಇತರ ತೆರಿಗೆಗಳಿಂದ ಬರಬೇಕಾಗಿದೆ. ಇದನ್ನು ವಸೂಲುಮಾಡಿದರೆ ದೇಶದಲ್ಲಿ ಬಡ ರೈತನ ಮೇಲೆ ಏನು ಹೆಚ್ಚುವರಿ ಕಂದಾಯ ವಿಧಿಸುವ ಹಾಗೆಯೇ ಇಲ್ಲ. ವಿಷ್ಣು ಬಲಿಚಕ್ರವರ್ತಿಯನ್ನು ತುಳಿಯಲು ವಾಮನಾವತಾರವನ್ನು ತಾಳಿದಹಾಗೆ ಈ ಸರ್ಕಾರದವರು ರೈತರನ್ನು ವಿಶೇಷವಾಗಿ ತೆರಿಗೆಗಳ ಹೊರೆ ಯಿಂದ ತುಳಿಯುತ್ತಿದ್ದಾರೆ. ಆ ರೀತಿ ತುಳಿಯತಕ್ಕಂಥ ವ್ಯಕ್ತಿಗಳನ್ನು ಇವರು ಸೃಷ್ಟಿ ಮಾಡುತ್ತಿ ದ್ದಾರೆ. ರೈತರ ಕಷ್ಟವೇನೆಂಬುದನ್ನು ಇವರು ತಿಳಿಯಬೇಕು. ದಕ್ಷಿಣ ಕನ್ನಡ ಜಿಲ್ಲೆಯನ್ನು ನೋಡಿ ದರೆ ಅಲ್ಲಿನ ರೈತರು ಯಾವ ರೀತಿ ಪ್ರಕೃತಿ ದೈವವನ್ನು ನೆನೆಸುತ್ತಿರುತ್ತಾರೆಂಬುದನ್ನು ಕಾಣಬಹುದು. ಇನ್ನು ಸರ್ವೆ ಸೆಟಲ್‌ಮೆಂಟ್ ವರದಿಯಲ್ಲಿ ಕೆಲವು ಸಣ್ಣ ನೀರಾವರಿ ಯೋಜನೆಗಳನ್ನು ಈಗಾಗಲೇ ಕೈ ಗೊಳ್ಳುತ್ತಿದ್ದೇವೆಂದು ಹೇಳಿದ್ದಾರೆ. ನೀರಾವರಿ ಯೋಜನೆಗಳಾದರೂ ಬಹಳ ಕುತೂಹಲಕರವಾದ ವಿಷಯ. ಆದರೆ ನೀರಾವರಿ ಯೋಜನೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಇಲ್ಲಿ ಇರುವುದರಿಂದ ನನ್ನ ಕ್ಷೇತ್ರದ ವಿಷಯವಾಗಿ ಒಂದು ಮಾತನ್ನು ಹೇಳಬೇಕಾಗಿದೆ. ಸ್ವಾಮಿ, ನನ್ನ ಕ್ಷೇತ್ರದಲ್ಲಿ ಹೆಸರಿಗೆ ಮಾತ್ರ ಒಂದು ನೀರಾವರಿ ಯೋಜನೆ ಆಗಿದೆ. ಆ ಯೋಜನೆಗೆ 75 ಸಾವಿರ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಇದು 7 ವರ್ಷಗಳ ಕೆಳಗೆ ಆಯಿತು. ಅಲ್ಲಿ ಕೇವಲ ಎರಡಾಣೆ ಅಥವಾ ಮೂರಾಣೆ ಬೆಳೆ ಕೂಡಾ ಆಗುವುದಿಲ್ಲ. ಕಂಟ್ರಾಕ್ಟರ್ಸ್ ಮತ್ತು ಇಂಜಿನಿಯರ್ಸ್ ಒಟ್ಟಾಗಿ ಅಲ್ಲಿ 5

ಇಂಚು ದಪ್ಪ ಬೀಳುವ ಕಡೆ 1 ಇಂಚು ದಪ್ಪ ಸಿಮೆಂಟ್ ಹಾಕಿ ಹೆಚ್ಚು ನೀರು ನಿಲ್ಲದೆ ಸೋರಿಹೋಗುತ್ತಿದೆ. ಆದ್ದರಿಂದ ಈ ವರ್ಷ ನಾನೇ ಸ್ವತಃ ನಿಂತು ಮಣ್ಣಿನ ಕಟ್ಟೆಯನ್ನು ಸ್ವತಂತ್ರವಾಗಿ ಹಾಕಿಸಿದ್ದೇನೆ. ಇದು ನೀರಾವರಿ ಯೋಜನೆಯ ಬಗ್ಗೆ ಒಂದು ನಿದರ್ಶನವಾಗಿ ಕೊಟ್ಟಿದ್ದೇನೆ. ಈ ವಿಚಾರದಲ್ಲಿ ಸಂಭಂಧಪಟ್ಟ ಮಂತ್ರಿಗಳಿಗೂ ಬರೆದಿದ್ದೇನೆ. ಸರ್ಕಾರದವರು ಕಟ್ಟಿದಂತಹ ಡ್ಯಾಂ ಬೇಡ, ನಾವು ವರ್ಷೇ ವರ್ಷೇ ಮಣ್ಣಿನ ಕಟ್ಟೆಯನ್ನು ಹಾಕಿಸುತ್ತಿದ್ದೇವೆ, ಅದಕ್ಕೋಸ್ಕರ ವ್ಯಥಾ ಖರ್ಚುಮಾಡ ಬೇಡಿ ಎಂದು ಹೇಳಿದ್ದೇನೆ. ಅ ವಿಷಯ ಅವರಿಗೆ ಗೊತ್ತಿದೆ. ಆದ್ದರಿಂದ ಅವರು ಮಾಡಿದಂಥ ಯೋಜನೆಗಳ ಬಗ್ಗೆ ಸಾಕಷ್ಟು ನೀರಾವರಿಯಾಗದೆ ಅವು ಹೆಸರಿಗೆ ಮಾತ್ರ ಇವೆ. ಅಂತಹುಗಳನ್ನು ಇವರು ಹಾಕಿಸಿದ್ದಾರೆ. ನಮ್ಮ ಊರಿನ ರೈತರು ಪಾಪ ಗದ್ದೆಗಳ ಬಂಡುಗಳ ಗುಣಿಗಳಲ್ಲಿ ತೆಂಗಿನ ಸಸಿಗಳನ್ನು ಹಾಕಿಕೊಂಡಿದ್ದಾರೆ. ಬ್ರಿಟಿಷ್ ಸರ್ಕಾರದವರು ಮತ್ತು ಮದ್ರಾಸ್ ಸರ್ಕಾರದವರು ಅದನ್ನು ನೋಡಿ ಸಂತೋಷಪಟ್ಟು ಅದಕ್ಕೆ ಕಂದಾಯವನ್ನು ಹಾಕಿರಲಿಲ್ಲ. ರೈತ ಕಷ್ಟಪಟ್ಟು ಉಳು ಮೆಮಾಡಿ ತನ್ನ ಮನೆಯ ಉಪಯೋಗಕ್ಕೋಸ್ಕರ ಗದ್ದೆಗಳ ಬಂಡುಗಳಲ್ಲಿ ತೆಂಗಿನ ಸಸಿಗಳನ್ನು ಹಾಕಿ ಕೊಂಡಿದ್ದರೆ ಅದಕ್ಕೂ ನಮ್ಮ ಸರ್ಕಾರದವರು ಕಣ್ಣು ಇಟ್ಟಿದ್ದಾರೆ. ರೈತರಿಗೆ ಇಡೀ ಅವರ ಶರೀರ ಕ್ಕೆಲ್ಲಾ ತೆರಿಗೆಗಳನ್ನು ಹಾಕಿ ಅವರ ಶರೀರವನ್ನೆಲ್ಲಾ ಈಗಾಗಲೇ ಮುಚ್ಚಿಬಿಟ್ಟಿದ್ದಾರೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಇಷ್ಟು ಕಂದಾಯವನ್ನು ಹಾಕಬೇಡಿ, ಇಷ್ಟು ಕಂದಾಯವನ್ನು ಹಾಕಿ ಎಂದು ಹೇಳಿ ಸುಮ್ಮನೆ ಬಯ್ಯುವುದು ಬೇಡ.

ಶ್ರೀ ಬಿ. ಭಾಸ್ಕರಶೆಟ್ಟಿ.—ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನಗಳು ರೈತರು ಎಷ್ಟು ಕಷ್ಟ ಪಟ್ಟು ದುಡಿಯುತ್ತಾರೆ ಎಂದರೆ, ಅವರಿಗೆ ಉಳುಮೆ ಮಾಡುವುದಕ್ಕೆ ಸಾಕಷ್ಟು ಜಮೀನು ಸಿಕ್ಕದೆ ಗದ್ದೆಗಳ ಬಂಡುಗಳಲ್ಲಿ ಗುಣಿಗಳನ್ನು ಮಾಡಿ ಅದರಲ್ಲಿ ತೆಂಗಿನ ಸಸಿಗಳನ್ನು ಹಾಕಿಕೊಂಡು ಅದರಿಂದ ಬಂದಂತಹ ಬೆಳೆಯಿಂದ ಅವರು ತಮ್ಮ ಜೀವನವನ್ನು ನಡೆಸುತ್ತಿದ್ದಾರೆ. ಇದರಿಂದಲೇ ಗೊತ್ತಾಗು ತ್ತದೆ. ಅವರು ಎಷ್ಟು ಕಷ್ಟದಲ್ಲಿದ್ದಾರೆಂಬುದು. ಇಷ್ಟೊಂದು ಕಷ್ಟದೆಶೆಯಲ್ಲಿ ಅವರು ಇರುವಾಗ ಎಲ್ಲೋ ಅವರು ತಮ್ಮ ಮನೆಯ ಉಪಯೋಗಕ್ಕೋಸ್ಕರ ಶ್ರಮವಹಿಸಿ ಗದ್ದೆಗಳ ಗುಣಿಗಳಲ್ಲಿ ಅವರು ತೆಂಗಿನ ಸಸಿಗಳನ್ನು ಹಾಕಿಕೊಂಡಿದ್ದರೆ ಅದರ ಮೇಲೂ ಸರ್ಕಾರದವರು ಕಣ್ಣಿಟ್ಟರೆ ಅವರು ಸರ್ಕಾರ ದವರಿಗೆ ಶಾಪವನ್ನು ಹಾಕುತ್ತಾರೆ. ಇದರ ಮೇಲೆ ಇದುವರೆಗೂ ಯಾರೂ ಕಣ್ಣಿಟ್ಟಿರಲಿಲ್ಲ. ಇದರ ವಿಷಯದಲ್ಲಿ ನಾವು ಮದ್ರಾಸ್ ಸರ್ಕಾರದಲ್ಲಿದ್ದಾಗ ಹಿಂದಿನ ಸೆಟ್ಲ್‌ಮೆಂಟ್ ವರದಿಯಲ್ಲಿ ಈ ರೀತಿ ಬರೆದಿದ್ದಾರೆ. ಅದು ಏನೆಂದರೆ.

> "Cocoanut trees are mostly planted on the field bunds of wet land except near the gardens which produce profitable yields. At present no extra tax is levied on the cocoanut trees planted on the bunds of paddy fields but merely wet assessment is collected for the reason that the area of the bunds with cocoanut trees is included in the wet land."

ಎಂದು ಇದೆ. ಆ ಮೇಲೆ ಮೊನ್ನೆ ಈಗಿನ ಸರ್ಕಾರದವರು ಮಾಡಿರತಕ್ಕ ಸೆಟ್ಲ್‌ಮೆಂಟ್ ವರದಿಯಲ್ಲಿ ಏನು ಬರೆದಿದ್ದಾರೆಂದರೆ,

> "So basing on the above facts, 70 trees will be taken as the average number of trees per acre for this zone for working out the standard rate."

ಎಂದು ಬರೆದಿದ್ದಾರೆ. 70 ತೆಂಗಿನ ಸಸಿಗಳು ಇದ್ದರೆ ಒಂದು ಎಕರೆ ಎಂದು ಇಟ್ಟುಕೊಂಡು ಆ ಸಸಿ ಗಳಿಗೆ ಭೂಕಂದಾಯವನ್ನು ಏರಿಸಿದ್ದಾರೆ. ಇಷ್ಟರವರೆಗೂ ನಮ್ಮ ಭಾಗದಲ್ಲಿ ತೆಂಗಿನ ಮರಗಳಿಗೆ ಸರ್ಕಾರದವರು ಭೂಕಂದಾಯವನ್ನು ಹಾಕಿರಲಿಲ್ಲ. ಆದ್ದರಿಂದ ಸರ್ಕಾರದವರು ದಯಮಾಡಿ ಅದನ್ನು ಮಟ್ಟಿಗೆ ರಿಯಾಯಿತಿ ತೋರಿಸಬೇಕು. ಇಷ್ಟರವರೆಗೆ ನಮ್ಮಲ್ಲಿ ರೀಸೆಟ್ಲ್‌ಮೆಂಟ್ ಮೂರು ಸಲ ಆಗಿದೆ. ಬ್ರಿಟಿಷ್ ಸರ್ಕಾರ ಇದ್ದಾಗ ರೀಸೆಟ್ಲ್‌ಮೆಂಟಾಗಿದೆ, ಮದ್ರಾಸ್ ಸರ್ಕಾರ ಇದ್ದಾಗ ರೀಸೆಟ್ಲ್‌ಮೆಂಟ್ ಆಗಿದೆ. ಆದರೂ ಸಹ ಯಾರೂ ಗದ್ದೆಯ ಬಂಡುಗಳಲ್ಲಿ, ಗುಣಿಗಳಲ್ಲಿ ಇರತಕ್ಕ ತೆಂಗಿನ ಸಸಿಗಳಿಗೆ ಭೂಕಂದಾಯವನ್ನು ಹಾಕಿಲ್ಲ. ಆದ್ದರಿಂದ ಈಗ ಸರ್ಕಾರದವರು ಆ ತೆಂಗಿನ ಸಸಿ ಗಳಿಗೆ ಭೂಕಂದಾಯವನ್ನು ಹೇರಬಾರದು ಎಂದು ನಾನು ಹೇಳುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಯಲ್ಲಿ ಕಂದಾಯವನ್ನು ಪುನರ್ವಿಮರ್ಶೆಮಾಡಿರತಕ್ಕ ಸರ್ವೆ ಸೆಟ್ಲ್‌ಮೆಂಟ್ ಆಫೀಸರು ಏನಿದ್ದಾರೆ ಅವರು ಅದನ್ನು ನಿಶ್ಚಿಯಮಾಡುವಾಗ ಅಲ್ಲಿನ ಮಣ್ಣಿನ ಗುಣವನ್ನು ನೋಡಿ ಅದು ಅಷ್ಟು ಫಲವತ್ತಾದ

(ಶ್ರೀ. ಬಿ. ಭಾಸ್ಕರಶೆಟ್ಟಿ)

ಮಣ್ಣು ಅಲ್ಲ. ಅದು ಕನಿಷ್ಟ ತರಗತಿಯ ಮಣ್ಣು ಎಂದು ಹೇಳಿದ್ದಾರೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಣ್ಣು ಪರೀಕ್ಷೆಯನ್ನು ಮಾಡಿ ರೈತನಿಗೆ ವ್ಯವಸಾಯ ಮಾಡುವುದಕ್ಕೆ ಬೇಕಾದ ಸೌಲಭ್ಯ ವನ್ನು ಒದಗಿಸದೆ ಸರ್ಕಾರದವರು ರೈತನ ಮೇಲೆ ಭೂಕಂದಾಯವನ್ನು ಏರಿಸಿದ್ದು ತುಂಬಾ ತಪ್ಪು ಎಂದು ನಾನು ಹೇಳುತ್ತೇನೆ. ಮತ್ತು ಅದು ಕಾನೂನು ಬಾಹಿರವಾಗಿದೆ ಎಂದು ನಾನು ಹೇಳು ತ್ತೇನೆ. ಸಾಧಾರಣವಾಗಿ 400-500 ಜನಗಳು ಈ ರೀತಿ ಸರ್ಕಾರದವರು ಕಂದಾಯವನ್ನು ಏರಿಸು ವುದು ಕಾನೂನು ಬಾಹಿರವಾಗಿದೆ ಎಂದು ಡೆಪ್ಯುಟಿ ಕಮೀಷನರಿಗೆ ಅರ್ಜಿಯನ್ನು ಕಳುಹಿಸಿದ್ದಾರೆ ಆ ಬಗ್ಗೆ ಡೆಪ್ಯುಟಿ ಕಮೀಷನರ ಹತ್ತಿರ ಚರ್ಚೆ ಮಾಡಬೇಕು ಎಂದು ಅವರ ಹತ್ತಿರ ಹೋದಾಗ ಅವರು ನನಗೆ ಒಂದು ನಿಮಿಷವೂ ಪುರುಷತ್ತಿಲ್ಲ ನಾಳೆ ಬನ್ನಿ ಎಂದು ಹಿಂದಕ್ಕೆ ಕಳುಹಿಸಿದರು. ಈ ವಿಷಯ ದಲ್ಲಿ ಒಂದು ನಿಷ್ಕರ್ಷೆಗೆ ಬರಲು ಸಾಧ್ಯವಾಗಲಿಲ್ಲ. ಸರ್ವೆ ಕಾಪಿಯನ್ನು ಕೇಳಿದರೆ ಅದು ಸಿಕ್ಕುವು ದಿಲ್ಲ. ಪುನರ್‌ವಿಮರ್ಶೆ ಮಾಡಿದ ಈ ಸ್ಟ್ಯಾಂಡರ್ಡ್ ಕಂದಾಯದ ರೇಟನ್ನು ನಾವು ಮೊದಲು ಪ್ರತಿ ಯೊಂದು ಗ್ರಾಮದ ಚಾವಡಿಯ ಮುಂದೆಯೂ ಹಾಕಿದ್ದೇವೆ ಎಂದು ಮಾನ್ಯ ಕಂದಾಯ ಮಂತ್ರಿ ಗಳು ಹೇಳಿದರು. ಹಳೆಯ ಮೈಸೂರಿನಲ್ಲಿರತಕ್ಕ ಗ್ರಾಮಗಳ ಚಾವಡಿಗಳು ಯಾವ ರೀತಿ ಇವೆಯೋ ನಮಗೆ ಅದು ಗೊತ್ತಿಲ್ಲ. ಆದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗ್ರಾಮದ ಪಟೇಲರ ಮನೆಯೇ ಚಾವಡಿಯಾಗಿದೆ. ಈಗ್ಗೆ ಕೆಲವು ತಿಂಗಳ ಹಿಂದೆ ಪುನರ್‌ವಿಮರ್ಶಿತ ಕಂದಾಯದ ರೇಟಿನ ವರದಿ ಯನ್ನು ಸರ್ಕಾರದವರು ಪಟೇಲರ ಮನೆಗೆ ಕಳಿಸಿಕೊಟ್ಟಿದ್ದಾರೆ. ಪಟೇಲರ ಮನೆಯಲ್ಲಿ ಆ ವರದಿ ಯನ್ನು ಮಕ್ಕಳು ಹರಿದುಹಾಕಿದಂತಹ ಒಂದು ತುಂಡು ನನಗೆ ಸಿಕ್ಕಿದೆ. ಬೇಕಾದರೆ ನಾನು ಅದನ್ನು ತೆಗೆದುಕೊಂಡು ಬರುತ್ತೇನೆ. ನಿಜವಾಗಿಯೂ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರತಕ್ಕ ರೈತರಿಗೆ ಇಷ್ಟೊಂದು ಕಂದಾಯವನ್ನು ಹಾಕುತ್ತಾರೆ ಎಂದು ಗೊತ್ತಿರಲಿಲ್ಲ. ಇನ್ನು ಮೇಲೆ ಅವರಿಗೆ ಗೊತ್ತಾ ಗುತ್ತದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ರೈತರು ಕಾಮಧೇನು ಇದ್ದಹಾಗೆ. ಅವರು ಕಂದಾಯ ವನ್ನು ಸರ್ಕಾರಕ್ಕೆ ಟೆಲಿಗ್ರಾಮ್ ಮನಿಆರ್ಡರ್ ಕಳುಹಿಸಿದ್ದಾರೆ. ಲ್ಯಾಂಡ್ ರೆವಿನ್ಯೂ ಸರ್‌ಚಾರ್ಜ್ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಇವುಗಳನ್ನೆಲ್ಲಾ ಒಂದು ಪೈ ಕೂಡ ಬಾಕಿ ಇಲ್ಲದಂತೆ ಕೊಟ್ಟ ಜಿಲ್ಲೆ ಎಂದರೆ ದಕ್ಷಿಣ ಕನ್ನಡ ಜಿಲ್ಲೆ. ಅಲ್ಲಿ ಪಟೇಲರು ಮತ್ತು ಶ್ಯಾನುಭೋಗರು ಕಂದಾಯವನ್ನು ಕೇಳು ವುದಕ್ಕೆ ರೈತರ ಮನೆಯ ಬಾಗಿಲಿಗೆ ಬರಬೇಕಾಗಿಲ್ಲ. ರೈತರು ತಾವಾಗಿಯೇ ಬಂದು ಕಂದಾಯ ವನ್ನ ಕೊಡುತ್ತಿದ್ದಾರೆ. ಇಂಥಾ ಕಾಮಧೇನುವಿನಂತಹ ದಕ್ಷಿಣ ಕನ್ನಡ ಜಿಲ್ಲೆಯ ರೈತರ ಕುತ್ತಿಗೆಗೆ ಶ್ರೀಮಾನ್ ಕೃಷ್ಣಪ್ಪನವರು ಇಟ್ಟಂಥಹ ಕತ್ತಿ ಸರ್ವಥಾ ನ್ಯಾಯವಲ್ಲ. ದೊಡ್ಡ ದೊಡ್ಡ ಭೂಮಾಲೀಕ ರನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುವುದಕ್ಕೆ ಸರ್ಕಾರದವರಿಗೆ ಸಾಧ್ಯವಾಗಿಲ್ಲ. ಸರ್ಕಾರದವರು ಸರ್‌ಛಾರ್ಜನ್ನು ವಿಧಿಸಿದಾಗ ದೊಡ್ಡ ದೊಡ್ಡ ಭೂಮಾಲೀಕರು ಮತ್ತು ಮಠಾಧೀಶ್ವರರು ಹೈಕೋರ್ಟಿಗೆ ಹೋಗಿ ರಿಟ್ ಫೈಲ್ ಮಾಡಿದರು. ರಿಟ್ ಫೈಲ್ ಮಾಡಿ, ಸ್ಟೇ ತೆಗೆದುಕೊಂಡರು. ಅದರ ದುಡ್ಡು ನಿಮಗೆ ಬರಲಿಲ್ಲ, ಅದು ಬರುವಹಾಗೆಯೂ ಇಲ್ಲ. ಹೀಗಿದ್ದು ಪಾಪದ ರೈತರು ಬೇಸರ ಬೀಳುವ ಪರಿಸ್ಥಿತಿ ಬಂದಿದೆ. ರೈತರನ್ನು ದಿವಾಳಿಗೆ ತರುವ ನಿರ್ಣಯವನ್ನು ಮಂಡಿಸಿದ್ದಾರೆ. ಇದು ಸರ್ವಥಾ ನ್ಯಾಯವಲ್ಲ. ದಕ್ಷಿಣ ಕನ್ನಡ ಜಿಲ್ಲೆ ಮಟ್ಟಿಗಾದರೂ ವಿನಾಯಿತಿ ಕೊಡಬೇಕು. ಹಳೆಯ ಮೈಸೂರಿನಲ್ಲಿ ತಾವು ಹೇಳಿದಿರಿ, 40—50 ವರ್ಷವಾಯಿತು, ಕಂದಾಯವನ್ನು ಆವಾಗಿ ನಿಂದ ರಿಸೆಟಲ್ ಮಾಡಿಲ್ಲವೆಂದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1934ನೇ ಇಸವಿಯಲ್ಲಿಯೆ ರಿಸೆಟಲ್ ಮೆಂಟು ಆಗಿದೆ. 30 ವರ್ಷ ಮಾತ್ರವಾಗುತ್ತದೆ, ಅಷ್ಟೆ. ಆದರೂ ಪುನಃ ಏರಿಸಿದ್ದೀರಿ. ಆಗಿನ ಬಿಳಿ ಜನರು ನಮ್ಮ ಮೇಲೆ ಕರುಣೆ ತೋರಿಸಿ, ಹನ್ನೆರಡೂವರೆ ಪರ್ಸೆಂಟು ಏರಿಸಿದರು ಮಾತ್ರ ಇನ್ನು ಮೇಲೆ ಏರಿಸುವುದಿಲ್ಲವೆಂದು ಭಾಷೆ ಕೊಟ್ಟರು. ತಾವು ತಮ್ಮ ಸರ್ವಾಧಿಕಾರವನ್ನು ರೈತರ ಮೇಲೆ ಬೀರುವುದು ಅಷ್ಟಾಗಿ ಸಾಧುವಲ್ಲ. ಇದರಿಂದ ನಿಮ್ಮ ಪರಿಸ್ಥಿತಿ ಕೆಟ್ಟು ಹೋಗುತ್ತದೆ. ದೇಶದಲ್ಲಿ ದುರ್ಭಿಕ್ಷ ದೇವತೆ ತಾಂಡವಾಡುತ್ತಿರುವಾಗ, ನೃತ್ಯ ಮಾಡುತ್ತಿರುವಾಗ, ನಿಮ್ಮ ಕಂದಾಯದಿಂದ ಆಹಾರ ಸಮಸ್ಯೆ ಇನ್ನೂ ಕಠಿಣವಾಗಿ ಪರಿಣಮಿಸುತ್ತೆ ಎಂದು ಈ ಸಂದರ್ಭದಲ್ಲಿ ಎಚ್ಚರಿಕೆ ಕೊಡು ತ್ತೇನೆ. ಮಾನ್ಯ ಜತ್ತಿಯವರು ನಮ್ಮ ಮಟ್ಟಿಗಾದರೂ ಕಂದಾಯ ಮಾಫಿ ಮಾಡುತ್ತೇವೆ, ಕನ್ನಡ ಜಿಲ್ಲೆಯಲ್ಲಿ, ಎಂದು.

ಶ್ರೀ ಬಿ. ಡಿ. ಜತ್ತಿ.—ನಾನು ಹೇಳಿಲ್ಲವಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ಅವರು ಒಂದೊಂದು ಸಲ ನಿಜವಾಗಿ ಹೇಳುತ್ತೇನೆ ಎಂದು ಹೇಳು ತ್ತಿರುತ್ತಾರೆ. ಅಂದರೆ ಬಾಕೀದು ಸುಳ್ಳು ಅಂದಹಾಗಾಯಿತು. ನಿಜವಾಗಿ ಹೇಳುತ್ತೇನೆ, ಎಂದು ಹೇಳಿದಾಗ ಮಾತ್ರ ನಿಜ, ಮಿಕ್ಕದ್ದು ಅಲ್ಲವೆಂದು ತಿಳಿದುಕೊಳ್ಳಬೇಕು. (ನಗು)

ಶ್ರೀ ಬಿ. ಭಾಸ್ಕರಶೆಟ್ಟಿ.—ದೊಡ್ಡ ಮನಸ್ಸು ಮಾಡಿ, ನಮ್ಮ ಪರಿಸ್ಥಿತಿ ಅವಲೋಕಿಸಿ, ನಮ್ಮ ರೈತರ ಮೇಲೆ ದಯಾದೃಷ್ಟಿ ಬೀರಿ, ಕಂದಾಯವನ್ನು ಕೊಂಚ ಕಡಿಮೆ ಮಾಡಿ. ಹಿಂದಕ್ಕೆ ಒಬ್ಬ ಸದಸ್ಯರು ಹೇಳಿದಂತೆ, ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಅಲ್ಲ, ಇಡೀ ಮೈಸೂರು ದೇಶದ ಮಟ್ಟಿಗೇ ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡಿ, ಉಗ್ರ ಸರ್ವೆ 5-6 ವರ್ಷದವರೆಗೆ ಮಾಡಿ, ಆಮೇಲೆ ಕಂದಾಯವನ್ನು ಏರಿಸುವ ದೊಡ್ಡ ಕ್ರಮವನ್ನು ತೆಗೆದುಕೊಳ್ಳಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಯನ್ನು ಅರ್ಪಿಸುತ್ತೇನೆ.

†ಶ್ರೀ ಕೆ. ಎಂ. ದೇವಯ್ಯ (ಪೆರಿಯಾಪಟ್ಟಣ).—ಮಾನ್ಯ ಅಧ್ಯಕ್ಷರೆ, ಈಗತಾನೆ ನಮ್ಮ ಮುಂದೆ ಮಾನ್ಯ ರೆವಿನ್ಯು ಮಂತ್ರಿಗಳು ಸೆಟಲ್‌ಮೆಂಟ್ ವರದಿಗಳಿಗೆ ಸಂಬಂಧಿಸಿದ ನಿರ್ಣಯವನ್ನು ಮಂಡಿಸಿದ್ದಾರೆ. ರೆವಿನ್ಯೂ ರಿಸೆಟಲ್‌ಮೆಂಟು 30 ವರ್ಷಕ್ಕೆ ಒಂದಾವರ್ತಿ ಬರುವುದು ನ್ಯಾಯವಾದುದು. ಈ 30 ವರ್ಷಕ್ಕಿಂತ ಸ್ವಲ್ಪ ಜಾಸ್ತಿಯೆ ಆಗಿದೆ. ನಮ್ಮ ರೆವಿನ್ಯೂ ಮಂತ್ರಿಗಳು ನಿರ್ಣಯವನ್ನು ಮಂಡಿಸುವಾಗ ಈ ಹೊಸ ಕಂದಾಯವನ್ನು ಈಗ ಬಹಳ ಶಾಸ್ತ್ರರೀತ್ಯ ಮಾಡಿದ್ದಾರೆ. ಅದರಲ್ಲಿ ತಪ್ಪು ಬರಲಿಕ್ಕೆ ಕಾರಣವೆ ಇಲ್ಲ, 90 ಪರ್ಸೆಂಟು ಕರೆಕ್ಟ್ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆಂದು ಹೇಳಿದ್ದಾರೆ. ಅದನ್ನು ಒಪ್ಪಿಕೊಳ್ಳೋಣ. ಸೆಟಲ್‌ಮೆಂಟು ಸರ್ವೆಯನ್ನು 30 ವರ್ಷಕ್ಕೆ ಒಂದಾವರ್ತಿ ಮಾಡಿಬಿಟ್ಟು, ಭೂಮಿ ಎಷ್ಟು, ಫಲ ಆಗಿದೆಯೆ ರೈತರು ಎಷ್ಟರಮಟ್ಟಿಗೆ ಕಂದಾಯ ಕೊಡಲಿಕ್ಕೆ ಶಕ್ತರಿದ್ದಾರೆ ಎಂದು ಆಲೋಚನೆ ಮಾಡಿ, ಕಂದಾಯವನ್ನು ಪರಿಸ್ಥಿತಿಗೆ ಅನುಸಾರವಾಗಿ ಹೆಚ್ಚು ಮಾಡುವುದು ನ್ಯಾಯ. ಈಗ ನಮ್ಮ ಮುಂದೆ ರಿಸೆಟಲ್‌ಮೆಂಟ್ ಸರ್ವೆ ರಿಪೋರ್ಟು ಇದೆ. ಮೊದಲು ನಮ್ಮಲ್ಲಿ ಎಕರೆಗೆ ಭೂಕಂದಾಯ 5 ರೂಪಾಯಿ ಇರುವುದು, ಈಗ 17 ರೂಪಾಯಿ ಜಾಸ್ತಿ ಮಾಡಬೇಕೆಂದು ಶಿಫಾರಸು ಮಾಡಿದ್ದಾರೆ. ಆ ಸರ್ವೆ ರಿಪೋರ್ಟಿನಲ್ಲಿ ಏನು ಹೇಳಿದ್ದಾರೆ ನೋಡೋಣ:

> "I am doubtful if the general economic condition of the agriculturist has inproved considerably. None of the agriculturists in the zone have ever expressed to me during my enquiry in the villages that agriculture has turned out to be a profitable industry. The agriculturist does not know where he stands. Most of the agriculturists are heavily indebted. No doubt the prices of paddy and ragi, the principal crops in the zone have considerably increased. At the same time keeping face with the rise in wages the cost of cultivation has also increased and so also the cost of living. Hence one has to be cautions while levying assessment on these all important and the only food crops in this Lone."

ಇಷ್ಟು ಹೇಳಿದರೂ ಸ್ಟ್ಯಾಂಡರ್ಡು ಎಕರೆಗೆ 5 ರೂಪಾಯಿ ಇದ್ದದ್ದು 17 ರೂಪಾಯಿ ಮಾಡಿದ್ದಾರೆ. ಅವರೇ ಒಪ್ಪಿದ್ದಾರೆ: ನಮ್ಮ ಲಿವಿಂಗ್ ಸ್ಟಾಂಡರ್ಡು ಜಾಸ್ತಿಯಾಗಲಿಲ್ಲ, ಆರ್ಥಿಕ ಸ್ಥಿತಿ ಅಷ್ಟು ಉತ್ತಮವಾಗಿಲ್ಲವೆಂದು. ಹಾಗೆ ಒಪ್ಪಿಕೊಂಡವರೆ, ಕಂದಾಯವನ್ನು 17 ರೂಪಾಯಿಗೆ ಏರಿಸುವುದಕ್ಕೆ ಶಿಫಾರಸು ಮಾಡಿದ್ದಾರೆ. ನಾನಾದರೂ ಕೇಳುತ್ತೇನೆ: ಯಾವತ್ತು ರೈತನಿಗೆ ಕೊಡುವುದಕ್ಕೆ ಶಕ್ತಿ ಇಲ್ಲವೋ, ಯಾವತ್ತು ಅವನು ಸಾಲದ ಹೊರೆಯಿಂದ ನರಳುತ್ತಿದ್ದಾನೋ, ಅಂಥವನಿಗೆ ಇವತ್ತು ಇಷ್ಟು ಕಂದಾಯ ಕೊಡಲಿಕ್ಕೆ ಸಾಧ್ಯವೆ ಅನ್ನುವುದು ಮಾನ್ಯ ಮಂತ್ರಿಗಳು ಸ್ವಲ್ಪ ಯೋಚನೆ ಮಾಡಬೇಕಾದ ಸಂಗತಿಯಾಗಿದೆ. ಮುಂದೆ ವರದಿಯಲ್ಲಿ ಹೀಗೆ ಹೇಳಿದೆ:

> "Another reason in lowering the standard rate is that the groups proposed now are extensive and the lowest and the highest group of the previous settlement are covered in one and the same group new. Consequently the agriculturists of the former group, I will not be much affected by the increase in the standard rate while those under former lower groups, also which come under this large group now will feel the pinch of the new rates. Generally the area under the former lower groups is certainly more than the area in the former higher group..."

(ಶ್ರೀ ಕೆ. ಎಂ. ದೇವಯ್ಯ)

ಹೀಗೆಲ್ಲಾ ಹೇಳಿದಮೇಲೆ, ಕಂದಾಯ 4–5 ರೂಪಾಯಿ ಇದ್ದರು 17 ರೂಪಾಯಿ ಕೊಡಲಿಕ್ಕೆ ನ್ಯಾಯವೊ, ಕೊಡುವುದಕ್ಕೆ ಶಕ್ಯವಿದೆಯೊ, ನೋಡಬೇಕಾಗಿದೆ. ಶಕ್ತಿ ಇದ್ದರೆ ಕೊಡೋಣ. ಈ ಒಂದು 'ಏರುವಿಕೆ ಎಷ್ಟರಮಟ್ಟಿಗೆ ನ್ಯಾಯ ಅನ್ನುವುದನ್ನು ಸರಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ಇಷ್ಟು ರೈತರ ವಿಷಯವಾಯಿತು.

ಹಾಗೆಯೇ ನಮ್ಮ ಕೊಡುಗು, ಮಲೆನಾಡು ಪ್ರದೇಶ. ನಾವು ಅಲ್ಲಿ ಕಾಫಿ, ಕಿತ್ತಳೆ, ಏಲಕ್ಕಿ ಬೆಳೆಸುತ್ತಾ ಇದ್ದೇವೆ. ಒಂದು ಸೆಟಲ್‌ಮೆಂಟು ಸರ್ವೆ ಮಾಡುವಾಗ್ಗೆ, ಒಂದು ಕಂದಾಯ ನಿಗದಿ ಮಾಡುವಾಗ್ಗೆ, ಒಂದು ಸೆಟಲ್‌ಮೆಂಟ್ ಬದಲು ಇನ್ನೊಂದು ಸೆಟಲ್‌ಮೆಂಟು ತರುವಾಗ, ಹೇಗೆ ಏರುಪೇರು ಆಗಿದೆ ಅನ್ನುವುದನ್ನು ನೋಡಬೇಕು. ಅದು ಬಿಟ್ಟು ನಿಮ್ಮ ಸೆಟಲ್‌ಮೆಂಟ್ ಸರ್ವೆ ಆಫೀಸರು ಕಂದಾಯ ನಿಶ್ಚಿತ ಮಾಡುವಾಗ್ಗೆ ಏನು ಮಾಡಿದ್ದಾರೆಂದರೆ, 30 ವರ್ಷ ಬಿಟ್ಟರು. 1955-58ನೆ ಇಸವಿಯವರೆಗೆ ಕಾಫಿ ಧಾರಣೆ ಚೆನ್ನಾಗಿತ್ತು. ಆ ಲೆಕ್ಕವನ್ನು ತೆಗೆದುಕೊಂಡು ಕಂದಾಯ ವಿಧಿಸಿದ್ದಾರೆ. 1940ನೇ ಇಸವಿಯಲ್ಲಿ ಒಂದು ಖಂಡಿ ಕಾಫಿಗೆ 100 ರೂಪಾಯಿ ಇತ್ತು; ಒಂದು ಕಾಫಿ ಎಸ್ಟೇಟು ಮಾರಿದರೂ ಒಂದು ಮನೆ ಬೆಲೆ ಬರುತ್ತಿರಲಿಲ್ಲ. ಆ ಇಸವಿಯನ್ನು ಬಿಟ್ಟು, ಯಾವ ಸಮಯದಲ್ಲಿ ಜಾಸ್ತಿ ಇತ್ತೊ ಅದನ್ನು ತೆಗೆದುಕೊಂಡು ಕಂದಾಯ ವಿಧಿಸಿದ್ದಾರೆ. ಕಂದಾಯ ಎಷ್ಟು ಜಾಸ್ತಿ ವಿಧಿಸಿದ್ದಾರೆಂದರೆ, ನಮ್ಮಲ್ಲಿ ಕಾಫಿ ತೋಟಕ್ಕೆ ಎಕರೆಗೆ 2 ರೂಪಾಯಿ ಇದ್ದದ್ದು, ಎಕರೆಗೆ 76 ರೂಪಾಯಿ ಶಿಫಾರಸು ಮಾಡಿದ್ದಾರೆ. ಮೊನ್ನೆ ಶ್ರೀಮಾನ್ ಅಪ್ಪಣ್ಣನವರು ಹೇಳಿದಹಾಗೆ, 3,700 ಪರ್ಸೆಂಟ್ ಜಾಸ್ತಿ ಮಾಡಿದ್ದಾರೆ. ಇದು ಯಾವ ನ್ಯಾಯ, ಯಾವ ಧರ್ಮ? ಇದನ್ನು ರೈತನಿಗೆ ಕೊಡಲಿಕ್ಕೆ ಸಾಧ್ಯವೆ? ಇದರಿಂದ ದೊಡ್ಡ ಪ್ಲಾಂಟರುಗಳಿಗೆ ಅಫೆಕ್ಟು ಆಗುವುದಿಲ್ಲ, ಏತಕ್ಕೆಂದರೆ ಅವರು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸು ಕೊಡುತ್ತಾರೆ, ಕಂದಾಯ ಜಾಸ್ತಿ ಕೊಟ್ಟರೆ, ಅಗ್ರಿಕಲ್ಚರ್ ಇನ್‌ಕಂಟ್ಯಾಕ್ಸು ಕೊಡುವುದರಲ್ಲಿ ಕಡಿಮೆಯಾಗುತ್ತದೆ. ಈ ರೀತಿ ಕಂದಾಯವನ್ನು ಜಾಸ್ತಿಮಾಡಿದ ಮೇಲೆ ದೇಶಕ್ಕೆ ಹೆಚ್ಚು ಉತ್ಪತ್ತಿ ಇನ್ನುಮುಂದೆ ಬರುವುದಿಲ್ಲ. ಅಷ್ಟೇ ಅಲ್ಲ, ಸಣ್ಣ ಕಾಫೀ ತೋಟ ಇಟ್ಟುಕೊಂಡಿರುವವರು ಆ ತೋಟವನ್ನು ಬಿಟ್ಟು ಓಡಿ ಹೋಗಬೇಕಾಗುತ್ತದೆ. ಅವರೇ ಇಲ್ಲಿ ರಿಪೋರ್ಟಿನಲ್ಲಿ ಕೊಟ್ಟಿರುವಂತೆ ಒಂದು ಏಕರೆಯಲ್ಲಿ ವ್ಯವಸಾಯ ಮಾಡಬೇಕಾದರೆ 280 ರೂಪಾಯಿಗಳಷ್ಟು ಖರ್ಚಾಗುತ್ತದೆ. ಇದರಿಂದ ಬರುವ ಉತ್ಪತ್ತಿ ಸುಮಾರು 170 ರೂಪಾಯಿಗಳಷ್ಟಾಗುತ್ತದೆ. ಒಟ್ಟಿನಲ್ಲಿ ಒಂದು ಎಕರೆಯಷ್ಟು ಜಮೀನನ್ನು ನಮ್ಮ ಭಾಗದಲ್ಲಿ ಮಾಡುವ ರೈತನಿಗೆ ಸುಮಾರು 30 ರೂಪಾಯಿಗಳಷ್ಟು ಲಾಭ ಬರುತ್ತದೆ. ಇದರಲ್ಲಿ 17 ರೂಪಾಯಿಗಳಷ್ಟು ಹೆಚ್ಚು ಕಂದಾಯ ಕೊಡಬೇಕೆಂದು ಹೇಳಿದರೆ ಆತ ಅವನ ಮಕ್ಕಳು ಮರಿಯನ್ನು ಸಾಕುವುದು ಹೇಗೆ? ಅವನು ಊಟ ಮಾಡುವುದಾದರೂ ಹೇಗೆ? ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವುದಾದರೂ ಹೇಗೆ? ಏನೋ ದೊಡ್ಡ ತೋಟಗಳವರು ಶಕ್ತಿ ಇದ್ದರೆ ನೀವು ಹೆಚ್ಚುಮಾಡಿರುವ ಪ್ರಮಾಣದಲ್ಲಿ ಕಂದಾಯವನ್ನು ಕೊಡಬಹುದು. ಆದರೆ ಬಡ ತೋಟಗಾರನಾಗಿರುವವನಿಗೆ ಶಕ್ತಿ ಎಲ್ಲಿಂದ ಬರಬೇಕು? ನಿನ್ನೆ ಮಂತ್ರಿಗಳು ಮಾತನಾಡುತ್ತ ಇದರಿಂದ ಮೊದಲು ಮೂರೂವರೆ ಕೋಟಿಯಷ್ಟು ಬರುತ್ತಿತ್ತು. ಈಗ ಇದರಂತೆ ನೋಡಿದರೆ ಸುಮಾರು ಏಳು ಕೋಟಿಯಷ್ಟು ಬರಬಹುದು. ನಮ್ಮ ಉತ್ಪತ್ತಿ ಈಗ ಸುಮಾರು ಒಂದು ಕೋಟಿ ಇಪ್ಪತ್ತೈದು ಲಕ್ಷದಷ್ಟು ಮಾತ್ರ ಇದೆ ಎಂದು ಹೇಳಿದ್ದಾರೆ. ನಾವುಗಳು ಪ್ರತ್ಯಕ್ಷವಾಗಿ ಕೊಡುವ ಈ ತೆರಿಗೆಯಲ್ಲದೆ ಪರೋಕ್ಷವಾಗಿ ನಾವೇನೂ ಕೊಡುತ್ತಿಲ್ಲವೇ? ಕಾಫೀ ಪ್ಲಾಂಟರುಗಳೆಲ್ಲ ಅಗ್ರಿಕಲ್‌ಚರು ಇನ್‌ಕಂ ಟ್ಯಾಕ್ಸು ಎಂದು ಕೊಡುತ್ತಿಲ್ಲವೇ? ನಮ್ಮ ಕೊಡಗು 60 ಮೈಲಿ ಉದ್ದ ಮತ್ತು 40 ಮೈಲಿ ಅಗಲ ಇರುವ ಸಣ್ಣ ಪ್ರದೇಶವಾಗಿದ್ದರೂ ಕೂಡ ಇಲ್ಲಿ ಸುಮಾರು ಒಂದು ಕೋಟಿ ಚಿಲ್ಲರೆಯಷ್ಟು ಅಗ್ರಿಕಲ್‌ಚರು ಇನ್‌ಕಂ ಟ್ಯಾಕ್ಸ್ ಎಂದು ಕೊಡುತ್ತಿದ್ದಾರೆ. ಕಾಫಿ ಬೆಳೆಯುತ್ತಿರುವುದರಿಂದ ಇಷ್ಟು ಕಂದಾಯ ಹೆಚ್ಚಾಗಿ ಕೊಡುತ್ತಿದ್ದಾರೆ. ಅಲ್ಲದೆ 1953—54ನೇ ಸಾಲಿನಲ್ಲಿ ಸುಮಾರು 1,80,86,000 ರೂಪಾಯಿಗಳಷ್ಟು ಅಗ್ರಿಕಲ್‌ಚರು ಇನ್‌ಕಂ ಟ್ಯಾಕ್ಸು ಎಂದು ಕೊಡುತ್ತಿದ್ದಾರೆ. ಎಂದರೆ ಸುಮಾರು 21,104 ಲಕ್ಷ ಎಕರೆಗಳಷ್ಟು ಭೂಮಿಗಾಗಿ ಇಷ್ಟು ಇನ್‌ಕಂ ಟ್ಯಾಕ್ಸ್ ಆಗಿ ಕೊಡುತ್ತಿದ್ದಾರೆ. ಇದೇ ರೀತಿ 1958—59ರಲ್ಲಿ 6,98 ಸಾವಿರ ಎಕರೆ ಭೂಮಿಯಿಂದ ಸುಮಾರು 17,57,471 ರೂಪಾಯಿಗಳಷ್ಟು ಅಗ್ರಿಕಲ್‌ಚರು ಟ್ಯಾಕ್ಸು ಎಂದು ಕೊಡುತ್ತಿದ್ದಾರೆ. ಹಾಗೆ ನಮ್ಮ ಭಾಗದಲ್ಲಿ ಕಾಫಿ ಬೆಳೆಯುತ್ತಿರುವ ಜನ ಬರೀ ಅಗ್ರಿಕಲ್‌ಚರು ಇನ್‌ಕಂ ಟ್ಯಾಕ್ಸ್ ಎಂದು ಒಂದೇ ತರಹದ ಕಂದಾಯವನ್ನು ಕೊಡುತ್ತಿಲ್ಲ. ಇದರ ಜೊತೆಗೆ ಕೇಂದ್ರದವರಿಂದ ಬೀಳುವ ಇತರ ಟ್ಯಾಕ್ಸ್‌ಗಳನ್ನೂ ಕೊಡಬೇಕಾಗುತ್ತದೆ ಮತ್ತು ಎಕ್ಸೈಸು ಟ್ಯಾಕ್ಸು ಕೊಡಬೇಕಾಗುತ್ತದೆ. ಇದರಿಂದ ರೈತಾಪಿ ಜನರು ಕೋಟಿಗಟ್ಟಲೆಯಷ್ಟು ಲಾಭವನ್ನು ಪಡೆಯುತ್ತಿಲ್ಲ ಎನ್ನುವುದರ ಕಡೆಗೆ ತಾವು ಯೋಚನೆ ಮಾಡಬೇಕು.

ನಮ್ಮ ಭಾಗದಲ್ಲಿ ಸುಮಮಾರು 20 ಸಾವಿರ ಕಾಫಿ ಪ್ಲಾಂಟರುಗಳು ಇರುತ್ತಾರೆ. ಇದರಲ್ಲಿ ನಮ್ಮ ಕೊಡಗು ಭಾಗವೂ ಮಲೆನಾಡು, ಚಿಕ್ಕಮಗಳೂರು ಭಾಗವೂ ಮಲೆನಾಡು, ಆದರೆ ಇಲ್ಲಿ ಕಂದಾಯ ನಿಗದಿ ಮಾಡಲು ಹೋದ ಅಧಿಕಾರಿಗಳು ಚಿಕ್ಕಮಗಳೂರಿಗೆ ಎಕರೆ ಒಂದಕ್ಕೆ ಒಂದೂವರೆ ಅಥವಾ ಎರಡು ರೂಪಾಯಿ ಎಂದು ಶಿಫಾರಸು ಮಾಡಿ ನಮ್ಮ ಭಾಗದಲ್ಲಿ ಎಕರೆ ಒಂದಕ್ಕೆ 76 ರೂಪಾಯಿಗಳಷ್ಟು ಇರಬೇಕೆಂದು ಶಿಫಾರಸು ಮಾಡಿದರೆ ಇದು ಯಾವ ನ್ಯಾಯ ಎಂದು ನಾನು ತಮ್ಮನ್ನು ಕೇಳಿಕೊಳ್ಳಬೇಕಾಗಿದೆ. ಇದು ಬಹಳ ಶಾಸ್ತ್ರೀಯವಾಗಿ ಮಾಡಿರುವಂತಹ ಸೈಂಟಿಫಿಕ್ ಮೆಥೆಡ್ಡೇ ಎಂದು ನಾನು ಇಲ್ಲಿ ಕೇಳಬೇಕಾಗಿದೆ. ಎಲ್ಲ ಭಾಗವೂ ಮಲೆನಾಡಿನಲ್ಲಿ ಸೇರಿರುವುದು, ಚಿಕ್ಕಮಗಳೂರು ಭಾಗದಲ್ಲಿ ಒಂದೂಕಾಲು, ಒಂದೂವರೆ ರೂಪಾಯಿ ಎಂದು ಇದ್ದುದನ್ನು ಅದಕ್ಕೆ ಎರಡರಷ್ಟು ಮಾಡಬಹುದು ಎಂದು ಹೇಳಿ ನಮ್ಮ ಭಾಗದಲ್ಲಿ ಮಾತ್ರ ಎಕರೆಗೆ 76 ರೂಪಾಯಿಗಳಷ್ಟು ಕೊಡಬೇಕೆಂದು ಅಧಿಕಾರಿಗಳು ಶಿಫಾರಸನ್ನು ಮಾಡಿದರೆ ಈ ಸಂಖ್ಯೆ ಯಾವ ರೀತಿಯಾಗಿ ಅವರು ಲೆಕ್ಕಕ್ಕೆ ತೆಗೆದುಕೊಂಡರು ಎನ್ನುವುದು ನಮಗೆ ಗೊತ್ತಾಗುತ್ತಿಲ್ಲ. ಚಿಕ್ಕಮಗಳೂರು ಮಲೆನಾಡು, ಕೊಡಗೂ ಮಲೆನಾಡು ಎನ್ನುವುದನ್ನು ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳು ಗಮನಕ್ಕೆ ತೆಗೆದುಕೊಂಡು ಎಲ್ಲ ಭಾಗದಲ್ಲಿಯೂ ಸರಿಸಮಾನವಾದ ರೀತಿಯಲ್ಲಿ ಕಂದಾಯವನ್ನು ಹಾಕುವುದರ ಕಡೆಗೆ ವಿಚಾರ ಮಾಡಬೇಕೆಂದು ನಾನು ಇಲ್ಲಿ ಕೇಳಿಕೊಳ್ಳುತ್ತೇನೆ. ಇದರಂತೆ ನೀವು ಮಾಡುವುದಾದರೆ, ಇನ್ನುಮುಂದೆ ಕಾಫಿ ಪ್ಲಾಂಟರುಗಳು ಉಳಿಯುವಂತಿಲ್ಲ. ಅವರುಗಳ ತೋಟವನ್ನು ಬಿಡಬೇಕಾಗಿ ಬರುತ್ತದೆ. ಕಂದಾಯ ಜಾಸ್ತಿ ಮಾಡಬೇಕಾದರೆ ಮಾಡೋಣ, ಜಾಸ್ತಿ ಕೊಡಲು ಶಕ್ತಿ ಇದ್ದವರು ಕೊಡುತ್ತಾರೆ. ಕಂದಾಯವನ್ನು ಏರಿಸಬೇಕು, ಆದರೆ ಎಷ್ಟರಮಟ್ಟಿಗೆ ಏರಿಸಬೇಕು ಎನ್ನುವುದರ ಕಡೆಗೆ ತಾರತಮ್ಯ ನೋಡಿಕೊಂಡು ಏರಿಸಬೇಕು. ಇವೊತ್ತು ನಮ್ಮ ಮಲೆನಾಡು ಭಾಗ ಮೈಸೂರಿಗೆ ಒಂದು ಕಾಮಧೇನುವಾಗಿರುವಂತಹುದು. ಇಷ್ಟು ಚಿಕ್ಕಭಾಗವಾದ ಕೊಡಗು ಪ್ರಾಂತ ನಮ್ಮ ದೇಶಕ್ಕೆ ಸುಮಾರು ಎರಡೂವರೆ ಕೋಟಿಯಷ್ಟು ವರಮಾನ ಕೊಡುತ್ತದೆ.

ಸ್ವಾಮೀ, ನಿನ್ನೆ ದಿವಸ ಇಲ್ಲಿ ಮಾನ್ಯಮಂತ್ರಿಗಳು ಮಾತನಾಡುತ್ತ, ನಮ್ಮ ದೇಶದಲ್ಲಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಜನರು ಎಲ್ಲರಿಗಿಂತಲ್ಲೂ ಸರಕಾರಕ್ಕೆ ಮೊದಲು ಕಟ್ಟುವಂತಹವರು ಎಂದು ಹೇಳಿದರು. ನಮ್ಮ ಭಾಗದಲ್ಲಿಯೂ ಕೂಡ ಜನರು ಕಂದಾಯವನ್ನು ಸರಿಯಾಗಿ ಸಕಾಲದಲ್ಲಿ ಕೊಡುತ್ತಾರೆ. ಇದನ್ನು ಬೇಕಾದರೆ ತಾವು ಪರಿಶೀಲನೆ ಮಾಡಬಹುದು. ಫೆಬ್ರುವರಿ ಮಾರ್ಚು ತಿಂಗಳ ವೇಳೆಗೆ ನೂರಕ್ಕೆ ತೊಂಬತ್ತರಷ್ಟು ಜನರು ಕಂದಾಯವನ್ನು ಸರಕಾರಕ್ಕೆ ಪೂರ್ತಿಯಾಗಿ ಕಟ್ಟಿರುತ್ತಾರೆ. ಹೀಗೆ ಸರಿಯಾಗಿ ಕೊಡುತ್ತಿದ್ದಾರೆಂದು ಈಗ ಪುನಃ ಕಂದಾಯವನ್ನು ಏರಿಸುತ್ತಿದ್ದಾರೆಂದು ನಾವು ಜನತೆಯ ಮುಂದೆ ಹೇಳಿದರೆ ಅವರುಗಳಿಗೆ ನಾವು ಸರಿಯಾದ ಜವಾಬು ಕೊಡುವುದಕ್ಕೆ ಆಗುವುದಿಲ್ಲ. ಯಾವ ಯಾವ ಸೌಕರ್ಯಗಳನ್ನು ಮಾಡಿಕೊಡುವುದಕ್ಕೋಸ್ಕರ ಹೀಗೆ ಕಂದಾಯವನ್ನು ಏರಿಸುತ್ತಿದ್ದೀರಿ ಎಂದು ನಮ್ಮನ್ನು ಅಲ್ಲಿರುವ ಜನ ಕೇಳುತ್ತಿದ್ದಾರೆ. ನಮ್ಮ ಭಾಗಗಳು ಈ ದೇಶಕ್ಕೆ ಸೇರಿದ ಮೇಲೆ ಜನಕ್ಕೆ ಬೇಕಾದಷ್ಟು ಆಸ್ಪತ್ರೆಗಳನ್ನು ಮಾಡಲಿಲ್ಲ. ಸುಮಾರು 13 ಆಸ್ಪತ್ರೆಗಳಲ್ಲಿ ಡಾಕ್ಟರುಗಳೇ ಇಲ್ಲದೇ ಇದ್ದರೆ ಜನಕ್ಕೆ ಮೆಡಿಕಲ್ ಫೆಸಿಲಿಟೀಸ್‌ಗಳು ಹೇಗೆ ಸಿಗಬೇಕು ? ರಸ್ತೆಗಳನ್ನು ಸರಿಯಾಗಿ ಮಾಡಿಸಿಲ್ಲ ಮತ್ತು ಜನಕ್ಕೆ ಬೇಕಾದ ಇನ್ನಿತರ ಸೌಕರ್ಯಗಳನ್ನು ಒದಗಿಸದೆ ಕಂದಾಯ ಏರಿಸಿ ಜನ ಕೊಡಬೇಕೆಂದರೆ ಅವರು ಹೇಗೆ ಕೊಡಬೇಕು ! ಎಂದು ನಮ್ಮ ಜನ ಇಂತಹ ಪ್ರಶ್ನೆಗಳನ್ನು ನಾವು ಅವರ ಕ್ಷೇತ್ರಗಳಿಗೆ ಹೋದಾಗ ಕೇಳುತ್ತಾರೆ. ಅದಕ್ಕೆ ನಾವುಗಳು ಜವಾಬು ಕೊಡುವುದಕ್ಕೆ ಆಗುವುದಿಲ್ಲ. ತಾವು ಇವೊತ್ತು ಹದಿನಾರಾಣೆಯಲ್ಲಿ ಒಂದು ಆಣೆ ಭಾಗದಷ್ಟು ಮಾತ್ರ ಕಂದಾಯವನ್ನು ಹೆಚ್ಚಾಗಿ ಹಾಕುತ್ತಿದ್ದೇವೆಂದು ಹೇಳಿದರೂ ಅದನ್ನು ಜನ ಕೊಡುವುದಕ್ಕೆ ಕಷ್ಟವಾಗುತ್ತದೆ. ಇದನ್ನು ಶೇಕಡಾ 50 ಅಥವಾ 60ರಷ್ಟು ಕಡಿಮೆ ಮಾಡಲು ಪ್ರಯತ್ನ ಮಾಡಬೇಕು ಮತ್ತು ಇದನ್ನು ಪರಿಶೀಲನೆ ಮಾಡಿ ವಿಚಾರ ಮಾಡಬೇಕೆಂದು ಹೇಳುತ್ತೇನೆ. ಇದರಲ್ಲಿ ಹೇಳಿರುವ ಕೆಲವು ಲೋಪ ದೋಷಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ಬರಲೆಂದು ಎತ್ತಿ ತೋರಿಸಿದ್ದೇನೆ, ಸರಿಯಾದ ರೀತಿಯಲ್ಲಿ ಇದನ್ನು ಯಾವ ರೀತಿ ಹೆಚ್ಚು ಮಾಡಬಹುದು ಎಂಬುದನ್ನು ಯೋಚನೆ ಮಾಡಬೇಕೆಂದು ಕೋರುತ್ತೇನೆ. ಇಷ್ಟು ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮೀ, ಈ ಸರ್ವೆ ಸೆಟಲ್‌ಮೆಂಟು ರಿಪೋರ್ಟಿನ ಬಗ್ಗೆ ಈಗಾಗಲೇ ಅನೇಕ ಜನ ಸ್ನೇಹಿತರುಗಳು ಇಲ್ಲಿ ಮಾತನಾಡುತ್ತ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಈ ಮಾನ್ಯ ಸಭೆಯ ಅಭಿಪ್ರಾಯಗಳನ್ನು ನೋಡಿದರೆ ಮತ್ತು ಇಲ್ಲಿ ಮಾನ್ಯ ರೆವಿನ್ಯೂ ಮಂತ್ರಿಗಳು ಮಾತನಾಡಿದ ಧಾಟಿ ನೋಡಿದರೆ ಈ ರೆವಿನ್ಯೂ ಮಂತ್ರಿಗಳು ಏನೋ ಒಂದು ತರಹದ ಗಂಡಾಂತರದ ಪರಿಸ್ಥಿತಿಗೆ ಸಿಕ್ಕುವಂತಹ ಪರಿಸ್ಥಿತಿ

(ಶ್ರೀ ಪಿ. ವೆಂಕಟಗಿರಿಯಪ್ಪ)

ನನಗಾದರೂ ಕಾಣಿಸುತ್ತಿದೆ. ಏಕೆಂದರೆ ಇಲ್ಲ ಬರೀ ವಿರೋಧ ಪಕ್ಷದ ಸದಸ್ಯರುಗಳಲ್ಲದೆ ಕಾಂಗ್ರೆಸ್ಸಿನಲ್ಲಿರುವ ಸುಮಾರು ಮುಕ್ಕಾಲು ಭಾಗದಷ್ಟು ಸದಸ್ಯರುಗಳು ಇದನ್ನು ಒಪ್ಪದೇ ಇರುವಂತಹ ಪರಿಸ್ಥಿತಿ ಇದೆ. ಇದನ್ನು ನಿಮ್ಮ ಅಧಿಕಾರಿಗಳು ಸೈಂಟಿಫಿಕ್ ಆಗಿ ಮಾಡಿದ್ದೇವೆಂದು ಹೇಳಿರುವ ರಿಪೋರ್ಟ್‌ನಿಂದ ರೈತವರ್ಗಕ್ಕೆ ಅನ್ಯಾಯವಾಗುತ್ತದೆ ಮತ್ತು ಕಂದಾಯವನ್ನು ಜಾಸ್ತಿ ಮಾಡುವುದು ಸರಿಯಲ್ಲ ಎಂದು ಸಭೆಯ ಸದಸ್ಯರು ಹೇಳುತ್ತಿದ್ದಾರೆ, ಇದು ನೋಡಿದರೆ ನಿಜವಾಗಿಯೂ ನಮ್ಮ ರೆವಿನ್ಯೂ ಮಂತ್ರಿಗಳು ಒಂದು ದೊಡ್ಡ ಗಂಡಾಂತರದ ಪರಿಸ್ಥಿತಿಗೆ ಸಿಕ್ಕಿಕೊಂಡಿದ್ದಾರೆ ಎಂದು ನನಗಾದರೂ ಅನಿಸುತ್ತಿದೆ. ಸ್ಕೂಲು ಮಾಡಿದ್ದಾರೆ ಆಸ್ಪತ್ರೆ ಕಟ್ಟಿದ್ದಾರೆ ನೀರಾವರಿ ಸೌಕರ್ಯ ಒದಗಿಸಿದ್ದಾರೆ ಎಂದು ಮಾನ್ಯ ಸದಸ್ಯ ಮಾದಯ್ಯ ಗೌಡರು ಬಹಳ ಸ್ವಾರಸ್ಯವಾಗಿ ಮಾತನಾಡಿದರು. ಈ ಕಾರ್ಯಗಳು ಇವರೇ ಹೊಸದಾಗಿ ಏನು ಮಾಡಿಲ್ಲ. ಈ ಮೊದಲು ಸರಕಾರ ಇರಲಿಲ್ಲವೇ ? ಆಸ್ಪತ್ರೆಗಳು ಇರಲಿಲ್ಲವೇ ? ಈ ಸರಕಾರ ಹೊಸದಾಗಿ ಏನುಮಾಡಿದ್ದಾರೆ ? ದೊಡ್ಡ ದೊಡ್ಡ ಪ್ರೊಜೆಕ್ಟ್ ಗಳನ್ನು ಸರಕಾರ ಕಟ್ಟಿಸಿದ್ದಾರೆ ಎಂದು ಅವರು ಹೇಳಿದರು. ಇವುಗಳಿಂದ ಕೆಲವು ಪ್ರದೇಶಗಳಿಗೆ ಪ್ರಯೋಜನವಾಗಿದೆ. ಏನೂ ಪ್ರಯೋಜನ ಪಡೆಯದೆ ಇರುವ ನಮ್ಮ ಕೋಲಾರ ಜಿಲ್ಲೆಯಲ್ಲಿ ಕಂದಾಯ ಮೂರುವರೆ ಅಷ್ಟು ಜಾಸ್ತಿ ಮಾಡುವ ಧೈರ್ಯ ಸರಕಾರ ಮಾಡಿದರೆ ಇವರ ಧೈರ್ಯ ನನಗೆ ಅರ್ಥವಾಗುವುದಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ಇದನ್ನು ನಾವು ಮಾಡಿಲ್ಲ. ರೀಸೆಟಲ್‌ಮೆಂಟಿನಲ್ಲಿ ಫಿಗರ್ಸ್ ಹೀಗೆ ಬಂದಿವೆ. ಅದನ್ನು ಸಭೆಯ ಮುಂದೆ ಇಟ್ಟಿದ್ದೇವೆ ನೋಡಬಹುದು.

ಶ್ರೀ ವೆಂಕಟಗಿರಿಯಪ್ಪ.—ಈ ರಿಪೋರ್ಟು ಬಹಳ ಸ್ವಾರಸ್ಯವಾಗಿದೆ. ಸಾಹಿತಿಗಳು ರಚಿಸಿದ ದೊಡ್ಡ ಸಾಹಿತ್ಯವಾಗಿದೆ. ನಮ್ಮ ಜಿಲ್ಲೆಯ ಬಗ್ಗೆ ಬೆಟ್ಟ, ಕಲ್ಲು, ಮರ ಇವುಗಳ ಬಗ್ಗೆ ಆಳವಾಗಿ ಯೋಚನೆ ಮಾಡಿ ರಿಪೋರ್ಟು ಬರೆದಿದ್ದಾರೆ. ನಮ್ಮ ಜಿಲ್ಲೆಯಲ್ಲಿರುವ ನಂದೀ ಬೆಟ್ಟದ ಬಗ್ಗೆ ಈ ರೀತಿ ಹೇಳಿದ್ದಾರೆ. ‘‘ಅಸ್ತಿ ನಂದೀಶ್ವರ ಕ್ಷೇತ್ರಂ ಪಂಚಪರ್ವತ ಸಂಯುತಂ ನದೀ ಪಂಚಕ ಸಂಯುಕ್ತಂ ಸದಾಂಘ ಪನಿ ಕ್ಯೆಂತನಂ’’ [Page 9 Re-Settlement Report, Kolar District] ರಿಪೋರ್ಟನ್ನು ನಾನು ಓದಿದ್ದೇನೆ. ರಿಪೋರ್ಟಿನಲ್ಲಿ ಜನಜೀವನ ಆರ್ಥಿಕ ಸಮಸ್ಯೆಗಳ ಬಗ್ಗೆ ಏನು ಬರೆದಿಲ್ಲ. ನಮ್ಮ ಕೋಲಾರ ಜಿಲ್ಲೆಯಲ್ಲಿ ಸಣ್ಣ ರೈತರು ಎರಡು ಮೂರು ಎಕರೆ ಜಮೀನು ಇಟ್ಟುಕೊಂಡು ವ್ಯವಸಾಯ ಮಾಡತಕ್ಕವರು ಹೆಚ್ಚಾಗಿ ಇದ್ದಾರೆ. ಅವರ ಬಡತನದ ಜೀವನ ಯಾವ ರೀತಿ ಇದೆ ಎನ್ನುವುದನ್ನು ಗಮನಿಸಬೇಕಾದುದು ಅಗತ್ಯವಾಗಿದೆ. ಬಡ ರೈತರು ಹುಲ್ಲಿನ ಗುಡಿಸಲಿನಲ್ಲಿ ಇರುತ್ತಾರೆ. ಅವರಿಗೆ ತಾರಸಿ ಮನೆಗಳಿಲ್ಲ. ಮಕ್ಕಳ ವಿದ್ಯಾಭ್ಯಾಸ ಮಾಡಿಸಲು ಅವರಿಗೆ ಸಾಧ್ಯವಿಲ್ಲದಾಗಿದೆ. ಬಡ ರೈತರ ಪರಿಸ್ಥಿತಿ ಬಹಳ ದಾರುಣವಾಗಿದೆ. ಇದನ್ನು ಅಧಿಕಾರಿಗಳು ಅಭ್ಯಾಸಮಾಡಿಲ್ಲ. ರಿಪೋರ್ಟು ಬರೆಯತಕ್ಕ ಸರಕಾರದ ದೊಡ್ಡ ಅಧಿಕಾರಿಗಳಿಗೆ ಬಡ ರೈತರ ಕಷ್ಟ ಗೊತ್ತಾಗುವುಲ್ಲ. ಸಾಮಾನ್ಯ ಜನರಿಗೆ ಕಷ್ಟದ ಪರಿಸ್ಥಿತಿ ಗೊತ್ತಿದೆ. ಉನ್ನತ ಅಧಿಕಾರಸ್ಥಾನಕ್ಕೆ ಬಂದು ಹೆಚ್ಚು ಸಂಬಳ ಪಡೆಯತಕ್ಕ ಅಧಿಕಾರಿಗಳಿಗೆ ಪೂರ್ಣವಾಗಿ ಜನರ ಕಷ್ಟ ಗೊತ್ತಾಗುವುದಿಲ್ಲ. ಅಧಿಕಾರಿಗಳ ಮನೋಭಾವವೇ ಹೀಗೆ. ಅಧಿಕಾರಿಗಳ ಪ್ರಯತ್ನದಲ್ಲಿ ಸರಕಾರದ ಏನೋ ಒಂದು ದೊಡ್ಡ ಕುತಂತ್ರ ಒಳಒಳಗೇ ನಡೆಯುತ್ತಿದೆ. ನಮ್ಮ ದೇಶದ ವ್ಯವಸಾಯ ಕ್ಷೇತ್ರದಲ್ಲಿ ಅಮೇರಿಕಾ ದೇಶದ ಬಂಡವಾಳ ಶಾಹೀ ಪದ್ಧತಿ ತರಲು ಕುತಂತ್ರ ನಡೆಯುತ್ತಿದೆ. ಇದರು ಮಾಡುತ್ತಿರುವ ಎಲ್ಲ ಯೋಜನೆಗಳಿಂದ ಶೇಕಡ ಹತ್ತು ಹದಿನೈದು ಜನರಿಗೆ ಅನುಕೂಲವಾಗುತ್ತಿದೆ. ಎಲ್ಲ ಯೋಜನೆಗಳ ಫಲ ಶೇಕಡ ಹತ್ತರಷ್ಟಿರುವ ಶ್ರೀಮಂತ ರೈತರಿಗೆ ಮಾತ್ರ ದೊರೆಯುತ್ತಿದೆ. ನಿಜವಾಗಿಯೂ ಬಡ ರೈತನಿಗೆ ಯಾವ ಫಲವೂ ದೊರೆಯುತ್ತಿಲ್ಲ. ವ್ಯವಸಾಯ ಕೂಲಿಕಾರರ ಪರಿಸ್ಥಿತಿ, ಸಾಮಾನ್ಯ ಬಡ ರೈತನ ಸ್ಥಿತಿ ಏನು ಇದೆ ಎನ್ನುವುದನ್ನು ಯೋಚನೆ ಮಾಡೋಣ. ಪ್ರತಿ ವರ್ಷ ಬೆಳೆ ಬಂದರೆ ಅವನ ಜೀವನ. ಇಲ್ಲದಿದ್ದರೆ ಬರಗಾಲ. ಹಿಂದಕ್ಕೆ ರಾಗಿ ಒಂದು ರೂಪಾಯಿಗೆ 30 ಸೇರು ಇದ್ದಿತು. ಇವತ್ತು ರಾಗಿ ಒಂದು ರೂಪಾಯಿಗೆ ಎರಡು ಸೇರು. ಹೇಗೆ ಬೆಲೆಗಳು ಹೆಚ್ಚಾಗಿರುವುದರಿಂದ ಕಂದಾಯ ಹೆಚ್ಚು ಮಾಡಬಹುದೆಂದು ಮಂತ್ರಿಗಳು ತಿಳಿಸುತ್ತಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ನಾಲ್ಕು ಎಕರೆ ಜಮೀನು ಇಟ್ಟುಕೊಂಡು ವ್ಯವಸಾಯ ಮಾಡುವ ಬಡವರ ಮತ್ತು ಹರಿಜನ ರೈತನನ್ನು ಉದಾಹರಣೆಗಾಗಿ ತಗೆದುಕೊಳ್ಳಬಹುದು. ಒಂದು ವರ್ಷ ಬೆಳೆ ಹೋದರೆ ಅವನು ಜೀವನ ಮಾಡುವುದು ಹೇಗೆ ? ಜಮೀನು ಮಾರಿಕೊಳ್ಳ ಬೇಕಾಗುತ್ತದೆ. ಸರಕಾರ ಇದನ್ನು ಯೋಚನೆ ಮಾಡಿದೆಯೇ ? ಸಣ್ಣ ಸಣ್ಣ ರೈತರು ಅಸ್ತಿತ್ವದಲ್ಲಿ ಇರುವುದು ಇವರಿಗೆ ಬೇಕಾಗಿಲ್ಲ. ಸಾಮಾನ್ಯ ರೈತ ನಿರ್ನಾಮವಾಗುವ ಸಂದರ್ಭ ಬಂದಿದೆ. ದೊಡ್ಡ ದೊಡ್ಡ ಜಮೀನುದಾರರು ಸಾವಿರಾರು ಎಕರೆ ಭೂಮಿ ಇಟ್ಟುಕೊಂಡು ಟ್ರಾಕ್ಟರ್

ಇಟ್ಟುಕೊಂಡು ಅಮೇರಿಕಾ ದೇಶದಲ್ಲಿರುವ ಹಾಗೆ ವ್ಯವಸಾಯ ಮಾಡುವವರು ಚೆನ್ನಾಗಿ ಬೆಳೆದು ಕೊಂಡು ಬರುತ್ತಾರೆ. ಬಡ ರೈತರಿಗೆ ದೊಡ್ಡ ಗಂಡಾಂತರ ಬಂದಿದೆ. ಸಾಮಾನ್ಯ ರೈತ ನಿರ್ನಾಮವಾಗುವ ಪರಿಸ್ಥಿತಿ ಬಂದಿದೆ ಎಂದೂ ಅದಕ್ಕೆ ಪ್ರಯತ್ನ ನಡೆಯುತ್ತಿದೆಯೆಂದೂ ಸಭೆಗೆ ತಿಳಿಸಲು ಬಯಸುತ್ತೇನೆ. ಯಾರಿಗೆ ಹಣ ಕೊಡುವ ಶಕ್ತಿ ಇದೆಯೋ ಅವರಿಂದ ಹಣ ವಸೂಲ್ಮಾಡುವ ತಾಖತ್ ಸರಕಾರಕ್ಕೆ ಇದೆಯೇ ? ಅನೇಕ ತೆರಿಗೆಗಳನ್ನು ಹಾಕಿದ್ದೀರಿ. ಸಾವಿರಾರು ಎಕರೆ ಜಮೀನು ಇಟ್ಟುಕೊಂಡವರು ಎಷ್ಟೋ ಜನ ಶ್ರೀಮಂತರು ಸರಕಾರಕ್ಕೆ ಟ್ಯಾಕ್ಸ ಕೊಡುತ್ತಾ ಇಲ್ಲ. ಅವರಿಂದ ವಸೂಲ್ಮಾಡುವ ಶಕ್ತಿ ಇದೆಯೇ ಎಂದು ಸವಾಲು ಹಾಕುತ್ತೇನೆ, ಶ್ರೀಮಂತರಿಂದ ಸರಿಯಾದ ರೀತಿಯಲ್ಲಿ ಟ್ಯಾಕ್ಸ ವಸೂಲ್ಮಾಡಿ ಎಂದು ಹೇಳುತ್ತೇನೆ. ಬಡ ರೈತರನ್ನು ನಾಮಾವಶೇಷ ಮಾಡುವುದು ಸರಿಯಲ್ಲ. ಸಾಮಾನ್ಯ ರೈತನ ಮೇಲೆ ತೆರಿಗೆ ಭಾರ ಹಾಕುವುದು ಸೂಕ್ತವಲ್ಲ ಎಂದು ಹೇಳುತ್ತೇನೆ.

ದೇಶದ ಪರಿಸ್ಥಿತಿ ಹೇಗಿದೆ ಎಂಬುದನ್ನು ನೋಡುವುದಾದರೆ—ನಮ್ಮ ಕೋಲಾರ ಜಿಲ್ಲೆಯಲ್ಲಿ 100 ಕ್ಕೆ 70-80 ಜನರು ತೀರಾ ಬಡವರು, ಸರ್ಕಾರದವರು ಕೊಟ್ಟಿರುವ ವರದಿಯಲ್ಲಿ ಆ ಜಿಲ್ಲೆಯಲ್ಲಿ ರೈತ ಒಂದು ಎಕರೆಯಲ್ಲಿ ಎಷ್ಟನ್ನು ಬೆಳೆಯ ಬಹುದು ಆತನಿಗೇನು ಉತ್ಪತ್ತಿ ಬರುತ್ತೆ ಎಂಬುದನ್ನು ತಿಳಿಸಿದ್ದಾರೆ. ಎಷ್ಟು ಎಕರೆ ಖುಷ್ಕಿ ಜಮೀನಿದ್ದರೆ ಅದರಲ್ಲಿ ಆತ ರಾಗಿ ಅಥವಾ ಹುರುಳಿಯನ್ನು ಬೆಳೆದರೆ ಎಷ್ಟು ಆದಾಯ ಬರುತ್ತದೆ ಎಂದು ತಿಳಿಸಿದ್ದಾರೆ. ವಾರ್ಷಿಕಾದಾಯ ಎಷ್ಟು ಬರಬಹುದು ಎಂದು ಹೇಳಿದ್ದಾರೆ. ನಾನು ಕೇಳುತ್ತೇನೆ ಗರೀಬ ರೈತರಿಗಾದರೂ ಸರ್ಕಾರದವರು ಏಕೆ ಕಂದಾಯವನ್ನು ತಪ್ಪಿಸಬಾರದು ? ಹಾಗೆ ಮಾಡದೆ ನಾವು ಅಲ್ಲೆಲ್ಲೋ ಭಾಕ್ರ ನಾಂಗಲ್ ಕಟ್ಟಿಸಿದ್ದೇವೆ, ಹಿರಾಕುಡ್ ಪ್ರಾಜೆಕ್ಟನ್ನು ಕಟ್ಟಿಸಿದ್ದೇವೆ, ದೊಡ್ಡ ವಿಶ್ವವಿದ್ಯಾನಿಲಯಗಳನ್ನು ಕಟ್ಟಿಸಿದ್ದೇವೆ, ಅದಕ್ಕಾಗಿ ಈ ಬಡ ರೈತರು ಇನ್ನು ಹೆಚ್ಚು ಕಂದಾಯವನ್ನು ಕೊಡಿ ಎಂದು ಸರ್ಕಾರದವರು ಕೇಳಿದರೆ ಯಾವ ನ್ಯಾಯ ? ಇದನ್ನೆಲ್ಲಾ ನೋಡಿದರೆ ನಾನಾಗಲೇ ಹೇಳಿದಂತೆ ಸರ್ಕಾರಕ್ಕೆ ಇಲ್ಲಿರತಕ್ಕ ಸಣ್ಣ ಪುಟ್ಟ ಹಿಡುವಳೀದಾರರನ್ನು ಸಂಪೂರ್ಣವಾಗಿ ನಿರ್ಮೂಲ ಮಾಡಿ ದೊಡ್ಡ ದೊಡ್ಡ ಜಮೀನ್ದಾರರಗಳನ್ನು ಸೃಷ್ಟಿಮಾಡುವ ಉದ್ದೇಶವಿರುತ್ತೆಂಬುದು ನಿರ್ವಿವಾದವಾದ ವಿಷಯ. ಇಲ್ಲಿಯವರೆಗೆ ಬೇಸಾಯ ಮಾಡಿಕೊಂಡಿದ್ದ ಜನರನ್ನು ಮೂಟೆಹೊರತಕ್ಕ ಕೂಲಿ ಕೆಲಸಕ್ಕೆ ಕಳುಹಿಸಬೇಕೆಂಬ ಉದ್ದೇಶ ಸರ್ಕಾರಕ್ಕಿರುವಂತೆ ಕಾಣುತ್ತಿದೆ. ಮಂತ್ರಿಗಳಾಗಿರತಕ್ಕವರು ತಾವೆಲ್ಲರೂ ರೈತನ ಮಕ್ಕಳು ಎಂದು ಹೇಳಿಕೊಳ್ಳುತ್ತಾ ಇವರು ಏನೇ ಕಂದಾಯ ಹಾಕಿದರೂ ಆ ರೈತ ತೆತ್ತೇ ತೆರುತ್ತಾನೆ ಎಂಬ ಭಾವನೆಯನ್ನಿಟ್ಟುಕೊಂಡಿದ್ದರೆ ಅದು ತಪ್ಪು. ಅಷ್ಟೇ ಅಲ್ಲದೆ ನಮ್ಮ ಕೋಲಾರ ಜಿಲ್ಲೆಯ ಜನರು ಬಹಳ ಕೆಚ್ಚೆದೆಯ ಜನರು. ಯಾವ ಸರ್ಕಾರವೇ ಇರಲಿ ಅವರು ರೊಚ್ಚಿಗೆದ್ದರೆ ಬಹಳ ಕೆಟ್ಟ ಜನರು. ರೈತ ವರ್ಗದ ಹೋರಾಟವನ್ನು ಎದುರಿಸಲು ಸರ್ಕಾರಕ್ಕೆ ಸಾಧ್ಯವಿಲ್ಲ. ಹಿಂದೆ 3 ರೂಪಾಯಿಗಳ ಕಂದಾಯವನ್ನು ಜಾಸ್ತಿ ಮಾಡಿದ್ದಕ್ಕೆ ಜನರು ತೀವ್ರಹೋರಾಟ ಚಳುವಳಿ ಪ್ರಾರಂಭಮಾಡಿದ್ದರಿಂದ ಕೆಲವೇ ವರ್ಷಗಳಲ್ಲಿ ಅದನ್ನು ಸರ್ಕಾರದವರು ತಗ್ಗಿಸಬೇಕಾಗಿ ಬಂತು ಎಂಬುದಾಗಿ ಸಹ ಈ ವರದಿಯಲ್ಲೇ ಹೀಗೆ ಹೇಳಿದ್ದಾರೆ.

> " ......that this District has been heavily taxed specially in regard to maximum assessment of dry lands as compared to the remaining parts of the State and the adjacent British Indian Taluks. In 1930 a Special Commission was appointed by the Government to go into this question But recommendations were shelved. The question however continued to be pressed upon the attention of the Government in subsequent years. In view of the continuous fall in the price of agricultural products, the Government in their Order dated 17th November 1937 directed that the maximum rate of assessment on dry lands which at that time was Rs. 3-8-0 be reduced to Rs. 2-12-0. "

ಶ್ರೀ ಎಂ. ವಿ. ಕೃಷ್ಣಪ್ಪ.—ಕೋಲಾರ ಜಿಲ್ಲೆಗೆ ಒಂದು ಪಕ್ಕಕ್ಕೆ ಚಿತ್ತೂರೂ ಇನ್ನೊಂದು ಪಕ್ಕಕೆ ಅನಂತಪುರ ಜಿಲ್ಲೆ ಮತ್ತು ಇನ್ನೊಂದು ಪಕ್ಕಕ್ಕೆ ಹೊಸೂರು ಬರುತ್ತೆ. ಆ ಜನರು ಅಲ್ಲಿ ಏನು ಕಂದಾಯ ಕೊಡುತ್ತಿದ್ದಾರೋ ಅಷ್ಟನ್ನು ನೀವು ಕೊಡುವುದಕ್ಕೇನು ಅಭ್ಯಂತರವಿದೆ ? ಅಷ್ಟನ್ನಾದರೂ ನೀವು ನ್ಯಾಯಾವಾಗಿ ಕೊಡಬೇಕಲ್ಲವೇ ?

ಶ್ರೀ ಪಿ. ವೆಂಕಟಗಿರಿಯಪ್ಪ.—ಹಿಂದೆ ಎಕರೆಗೆ 3.12 ಹಾಕಿದ್ದುದನ್ನು ಜನ ಒತ್ತಾಯ ಮಾಡಿದ್ದರಿಂದ ಅದನ್ನು ಸರ್ಕಾರದವರೇ ಎಕರೆಗೆ ರೂ : 2-25 ಕ್ಕೆ ಇಳಿಸಿದರು ಈ ಎಲ್ಲ ಕಾರಣಗಳಿಂದಲು ನಾನು ಕೋಲಾರ ಜಿಲ್ಲೆಗೆ ಕಂದಾಯವನ್ನು ಜಾಸ್ತಿ ಮಾಡಬಾರದೆಂದುಹೇಳುತ್ತೇನೆ. ನಮ್ಮ ಮಾನ್ಯ ಮಂತ್ರಿಗಳು ಪಕ್ಕದವರೇನು ಕಂದಾಯಕೊಡುತ್ತಾರೋ ನೀವೂ ಅಷ್ಟನ್ನೇ ಕೊಡಿ ಎಂದು ಹೇಳುತ್ತಾರೆ. ಆದರೆ ಆ ನೆರೆ ರಾಜ್ಯದಲ್ಲಿ ಕಂದಾಯ ಕಡಿಮೆ ಇದೆ. ಅಲ್ಲಿ ಹೆಚ್ಚಾದರು ಇಲ್ಲ ಹೆಚ್ಚು ಮಾಡಲೇ ಬೇಕೆಂಬುದುರಲ್ಲಿ ಅರ್ಥವಿಲ್ಲ ಇಲ್ಲಿ ಹದಿನಾರನೇ ಒಂದು ಭಾಗ ಕಂದಾಯವನ್ನು ಹಾಕಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಈ ವಿಚಾಗಳನ್ನೆಲ್ಲಾ ಅಧಿಕಾರಿಗಳು ಹಣಕಾಸಿನ ಸಚಿವರಿಂದ ಅವರೇನು ಹೇಳುತ್ತಾರೇ ಅದರಂತೆ ಇವರು ಇದೆಲ್ಲವನ್ನೂ ತಯಾರು ಮಾಡಿದ್ದಾರೆ. ಹೀಗೆ ಸರ್ಕಾರದವರು ತಾವಾಗೇ ಸೃಷ್ಟಿಮಾಡಿರತಕ್ಕ ಕಾಗದ ಪತ್ರಗಳ ಆಧಾರದ ಮೇಲೆ ಕಂದಾಯವನ್ನು ಜಾಸ್ತಿಮಾಡಲು ಖಂಡಿತ ಸಾಧ್ಯವಿಲ್ಲ. ಇಲ್ಲಿ ಮಾತನಾಡಿದ ಸದಸ್ಯರಲ್ಲಿ ಕೆಲವು ಕಾಂಗ್ರೆಸಿನ ಸದಸ್ಯರು ಇದನ್ನು ಮನಸ್ಸಿಲ್ಲದಿದ್ದರೂ ಮನಸಾರೆ ಒಪ್ಪಿದಂತೆ ಮಾತನಾಡಿ ಕಡೆಯಲ್ಲಿ ಇದು ದೋಷಪೂರಿತವಾಗಿದೆ ಎಂದು ಭಾಷಣವನ್ನು ಮುಕ್ತಾಯ ಮಾಡಿದ್ದಾರೆ. ನಮ್ಮ ರೆವಿನ್ಯೂ ಮಂತ್ರಿಗಳಿಗೆ ಕಥೆ ಹೇಳುವುದೆಂದರೆ ಬಹಳ ಇಷ್ಟ. ರೆವಿನ್ಯೂ ಮಂತ್ರಿಗಳಿಗೆ ಹೇಳಿಕೆಯೇ ಒಂದು ದೊಡ್ಡ ಕಥೆಯಾಗಿದೆ. ಅವರು ಈ ವರದಿಯನ್ನು ಬಹಳ ಶಾಸ್ತ್ರೋಕ್ತವಾಗಿ ತಯಾರಿಸಲಾಗಿರುತ್ತೆಂದು ಹೇಳಿರತಕ್ಕದ್ದು ಖಂಡಿತ ಒಪ್ಪತಕ್ಕದ್ದಲ್ಲ. ಏಕೆಂದರೆ ಈ ಇಲಾಖೆಯಲ್ಲಿ ಅಂಥ ಪರಿಣಿತರಾರೂ ಇಲ್ಲ. ಇಲ್ಲಿ ಕೋಲಾರ ಜಿಲ್ಲೆಗೆ ಇಲ್ಲ ಇವರು ಹೇಳಿರತಕ್ಕ ಬೆಳೆ ಎಲ್ಲಿ ಬರುತ್ತೆ, ಆ ರೇಟು ಇವರಿಗೆಲ್ಲಿ ಸಿಕ್ಕಿತು ಎಂಬುದನ್ನು ಕೇಳಬೇಕಾಗಿದೆ. ಕಡಲೇಕಾಯಿನಲ್ಲಿ ಒಂದು ಎಕರೆಗೆ 100 ರೂಪಾಯಿ ಖರ್ಚುಕಳೆದು ಉತ್ಪತ್ತಿಯಿಂದ ಎಂದು ಹೇಳಿದ್ದಾರೆ. ಈ ಬೆಳೆಯ ಗ್ರಾಸ್ ಇನಕಂ 300 ರೂ. ಗಳೆಂದು ಹೇಳಿದ್ದಾರೆ. ಕೆಲವು ಜಮೀನುಗಳಲ್ಲಿ ಎಕರೆಗೆ 8-4 ಪಲ್ಲ ಕಡಲೇಕಾಯಿ ಆಗುವುದಿಲ್ಲ ಎಲ್ಲೋ ಒಂದು ಕಡೆ ಅವರ ಹೇಳಿದ ಪ್ರಮಾಣದಲ್ಲಿ ಬೆಳೆಯಬಹುದು. ನಮ್ಮ ಜಿಲ್ಲೆಯಲ್ಲಿ ಭತ್ತದಿಂದ ಎಕರೆಗೆ

6-00 P. M.

470 ರೂಪಾಯಿ ಗ್ರಾಸ್ ಆದಾಯ ಇದೆ ಎಂದು ಹೇಳುತ್ತಾರೆ. ನಮ್ಮ ಜಿಲ್ಲೆಯಲ್ಲಿ ಬತ್ತದ ಬೆಳೆಯ ಅಂಕಿ ಅಂಶವನ್ನು ಹಿಂದಕ್ಕೆ ಎರಡರಷ್ಟು ಮಾಡಿದ್ದಾರೆ. ಆದರೂ ಕೂಡ ಇದನ್ನು ಸೈನ್‌ಟಿಫಿಕ್ ಆಗಿ ಮಾಡಿದ್ದೇವೆ ಎಂದು ಹೇಳುತ್ತಾ ಇದ್ದಾರೆ. ಇವರು ಕೊಟ್ಟಿರತಕ್ಕ ಅಂಶಗಳೆಲ್ಲಾ ಸರಿಯಾಗಿದೆ ಎಂದು ಹೇಳಿ ಯಾರೂ ಒಪ್ಪಲು ಸಾಧ್ಯವಿಲ್ಲ ಯಾರಾದರೂ ಇದನ್ನು ವಿರೋಧ ಮಾಡಿದರೆ ದೇಶಕ್ಕೆ ದ್ರೋಹಮಾಡಿದಂತಾಗುತ್ತದೆ ಎಂದು ಹೇಳುವುದು ಸರಿಯಲ್ಲ. ಇನ್ನು ಮಲ್ಬರಿ ವಿಷಯ ತೆಗೆದುಕೊಂಡರೆ——

Mr. DEPUTY SPEAKER.—Now the House will rise and reassemble tomorrow at 1 p.m.

———

The House adjourned at five Minutes past six of the Clock to meet again at One of the Clock on Thursday, the 4th March 1965.

———